# ಆರಂಭ ಕಾಲದ ಆರ್ಥಿಕ ಚಿಂತನೆ

ಈ ಅಧ್ಯಾಯದಲ್ಲಿ ನಾನು ಪ್ರಾಚೀನ ಯುಗದವರು, ಸ್ಕೊಲಾಸ್ಟಿಕರು (ಯುರೋಪಿನ ಮಧ್ಯಯುಗದ ಧಾರ್ಮಿಕ ಚಿಂತಕರು - 1500- 1600) ಮತ್ತು ವ್ಯಾಪಾರೋದ್ಯಮ ಯುಗದ ಚಿಂತಕರು (1500-1800) ಇವರೆಲ್ಲರೂ ಆರ್ಥಿಕ ಚಟುವಟಿಕೆಗಳ ಕುರಿತು ಮಂಡಿಸಿದ ಚಿಂತನೆಗಳನ್ನು ಸಾರಾಂಶ ರೂಪದಲ್ಲಿ ಮಂಡಿಸಲಿದ್ದೇನೆ. ಅವರ ಅಭಿಪ್ರಾಯಗಳಲ್ಲಿ ಕೆಲವೊಂದು ಸಾಮಾನ್ಯ ಲಕ್ಷಣಗಳಿದ್ದವು: ಹೆಚ್ಚು ಕಡಿಮೆ ಅವರೆಲ್ಲರೂ ಸಹ ಅವ್ಯವಸ್ಥಿತವಾಗಿ ಅಭಿಪ್ರಾಯಗಳನ್ನು ರೂಪಿಸಿಕೊಂಡಿದ್ದರು, ಆರ್ಥಿಕ ವ್ಯವಹಾರದ ಎಲ್ಲಾ ಕ್ಷೇತ್ರಗಳನ್ನು ತಮ್ಮ ಅವಗಾಹನೆಗೆ ತೆಗೆದುಕೊಂಡಿರಲಿಲ್ಲ ಮತ್ತು ಅವರೆಲ್ಲರೂ ಹೆಚ್ಚಾಗಿ ನಿಯಮ ಸೂಚಕರಂತೆ ಕಾಣಿಸುತ್ತಿದ್ದರು. ಆರ್ಥಿಕ ಚಟುವಟಿಕೆಯು ಹೇಗಿರುವುದೋ ಹಾಗೆ ಅದನ್ನು ವಿವರಿಸಲು ಮತ್ತು ವಿಶ್ಲೇಷಿಸಲು (ಧನಾತ್ಮಕ ಅರ್ಥಶಾಸ್ತ್ರ) ಹೆಚ್ಚಾಗಿ ಪ್ರಯತ್ನಿಸಿರಲಿಲ್ಲ, ಬದಲಿಗೆ ಅದು ಹೇಗಿರಬೇಕೆಂದು ಆದರ್ಶೀಕೃತವಾಗಿ ವಿವರಿಸಲು (ಪ್ರಮಾಣಕ ಅರ್ಥಶಾಸ್ತ್ರ) ಯತ್ನಿಸುತ್ತಿದ್ದರು. ನಿಜಕ್ಕೂ ಹೇಳಬೇಕೆಂದರೆ ಪುರಾತನ ಕಾಲದಲ್ಲಿ ಮತ್ತು ಮಧ್ಯಯುಗದ ಧಾರ್ಮಿಕ ಚಿಂತನೆಯ ಕಾಲದಲ್ಲಿ (ಸ್ಕೊಲಾಸ್ಟಿಸಮ್) ಆರ್ಥಿಕ ಹೇಳಿಕೆಗಳು ನೈತಿಕ ದರ್ಶನದ ಭಾಗವಾಗಿದ್ದವು ಮತ್ತು ಆರ್ಥಿಕ ಬದುಕಿಗೆ ನೈತಿಕ ತತ್ವಗಳನ್ನು ಅಳವಡಿಸುವುದರ ಬಗ್ಗೆ ಗಮನ ಕೊಡುತ್ತಿದ್ದವು. ವ್ಯಾಪಾರೋದ್ಯಮ ಯುಗದಲ್ಲಿ ಆರ್ಥಿಕ ಶೋಧನೆಗಳು ಎಲ್ಲಕ್ಕಿಂತ ಮಿಗಿಲಾಗಿ ಕಾಣಿಸಿಕೊಂಡಿದ್ದು ದೂರ ದೇಶದ ವ್ಯಾಪಾರದಲ್ಲಿ ತೊಡಗಿಕೊಂಡಿದ್ದ ವ್ಯಾಪಾರಿ ಬಂಡವಾಳಗಾರರು ತಮ್ಮ ವಿಶಿಷ್ಟ ಹಿತಾಸಕ್ತಿಗಳನ್ನು ಸಾಮಾನ್ಯ ಹಿತಾಸಕ್ತಿಗಳೆಂದು ಬಿಂಬಿಸುವ ಯತ್ನದಲ್ಲಿ ಬರೆಯುತ್ತಿದ್ದ ಲೇಖನಗಳಲ್ಲಿ ಹಾಗೂ ಕರಪತ್ರಗಳಲ್ಲಿ. ತಮ್ಮ ಹಡಗುಗಳನ್ನು ಹಾಗೂ ಹೊರದೇಶಗಳಲ್ಲಿನ ವ್ಯಾಪಾರ ಕೇಂದ್ರಗಳನ್ನು ರಕ್ಷಿಸಿಕೊಳ್ಳಲು ರಾಷ್ಟ್ರಪ್ರಭುತ್ವದ ಬೆಂಬಲವನ್ನು ಖಾತ್ರಿಪಡಿಸಿಕೊಳ್ಳಲು ಅವರು ಉತ್ಸುಕರಾಗಿದ್ದರು ಮತ್ತು ವಿನಿಮಯದಲ್ಲಿ ಉಪಯುಕ್ತವಾದ ಅಮೂಲ್ಯ ಲೋಹಗಳಿಂದ ರಾಜನ ಖಜಾನೆಯನ್ನು ತುಂಬಿಸಲು, ಆಮದಾಗುವ ಸರಕುಗಳ ಮೌಲ್ಯಕ್ಕಿಂತಲೂ ಹೆಚ್ಚಿನ ಮೌಲ್ಯವನ್ನು ತರುವ ಸರಕುಗಳ ರಫ್ತಿನ ಅನುಕೂಲತೆಗಳನ್ನು ಅವರು ಎತ್ತಿ ಹಿಡಿಯುತಿದ್ದರು.

ಇಂದು ಸ್ವಯಂವೇದ್ಯವಾದಂತಹ ಸ್ಪರ್ಧೆ ಹಾಗೂ ಪ್ರಗತಿ ಮುಂತಾದ ಅನೇಕ ಪರಿಕಲ್ಪನೆಗಳು ಆರಂಭ ಕಾಲದ ಬರಹಗಳಲ್ಲಿ ಇಲ್ಲವೇ ಇಲ್ಲ ಅಥವಾ ಕೇವಲ ಆರಂಭಿಕ ಶೈಲಿಯಲ್ಲಿ ಕಂಡುಬರುತ್ತವೆ, ಅವು ಆ ಕಾಲದ ಆರ್ಥಿಕ ವಾತಾವರಣವನ್ನು ಪ್ರತಿಬಿಂಬಿಸುತ್ತವೆ. ಪ್ರಾಚೀನ ಯುಗ ಹಾಗೂ ಮಧ್ಯಯುಗದ ಮತಧರ್ಮದ ಯುಗದಲ್ಲಿ ಆರ್ಥಿಕ ಪರಿಸ್ಥಿತಿಗಳು ಮೂಲಭೂತವಾಗಿ ಅಚಲವಾಗಿದ್ದವು ಹಾಗೂ ವ್ಯಾಪಾರೋದ್ಯಮದ ಬೆಳವಣಿಗೆ ಮತ್ತು ಅಭಿವೃದ್ಧಿಗಳು ಸಹ ಸಾಧಾರಣವಾಗಿದ್ದವು ಹಾಗೂ ಕೆಲವೇ ಕ್ಷೇತ್ರಗಳಿಗೆ ಸೀಮಿತವಾಗಿದ್ದವು.

## ಪ್ರಾಚೀನ ಯುಗ

ಮಾನವರು ಎಂದಿನಿಂದಲೂ ಆರ್ಥಿಕ ಅವಲೋಕನಗಳನ್ನು ಮಾಡುತ್ತಲೇ ಬಂದಿದ್ದಾರೆ. ಬದುಕುಳಿಯಬೇಕಾದರೆ ನಾವು ಆಹಾರವನ್ನು ಸೇವಿಸಬೇಕು ಹಾಗೂ ಆಹಾರವನ್ನು ಸೇವಿಸಬೇಕೆಂದರೆ ಅದನ್ನು ಉತ್ಪಾದನೆ ಮಾಡಬೇಕು. ಚಿತ್ರಗಳು ಹಾಗೂ ಬರವಣಿಗೆಯ ಆರಂಭದೊಂದಿಗೆ ಆರ್ಥಿಕ ಚಟುವಟಿಕೆಗಳನ್ನು ದಾಖಲೆ ಮಾಡುವುದು ಆರಂಭಗೊಂಡಿತು. ನಮ್ಮ ಅತ್ಯಂತ

ಹಿಂದಿನ ಪೂರ್ವಜರ ಪ್ರಕಾರ, "ಉತ್ಪಾದನೆ" ಎಂದರೆ ಮೊಟ್ಟಮೊದಲಿಗೆ ಬೇಟೆಯಾಡುವುದು ಹಾಗೂ ಆಹಾರ ಸಂಗ್ರಹಿಸುವುದು ಎಂದರ್ಥ. ಹಳೆಯ ಶಿಲಾಯುಗದ ಕಾಲದಲ್ಲಿ ಯುರೋಪಿನ ಗುಹಾಂತರ ಚಿತ್ರಗಳಲ್ಲಿ ಕಂಡುಬರುವಂತಹ ಬೇಟೆಯ ದೃಶ್ಯಗಳು, ಆ ಬೇಟೆಗಳಲ್ಲಿ ಬಳಕೆಯಾಗಿರುವಂತಹ ಆಯುಧಗಳಲ್ಲಿ ಅಡಕವಾಗಿರುವ ತಾಂತ್ರಿಕ ಹಾಗೂ ಸಂಘಟನಾತ್ಮಕ ಜ್ಞಾನವನ್ನು ಎತ್ತಿ ತೋರಿಸುತ್ತವೆ. ಆರ್ಥಿಕತೆಗೆ ಸಂಬಂಧಿಸಿದಂತಹ ಮೂಲಭೂತ ಮಾಹಿತಿಯು ನಂತರದ ಕಾಲದಲ್ಲಿ ಓದಿ ಬರೆಯಲು ಶಕ್ತಿಯಿದ್ದಂತಹ ಎಲ್ಲರಿಗೂ ಉಪಯುಕ್ತವಾಯಿತು. ಉದಾಹರಣೆಗೆ, ಸುಮಾರು ನಾಲ್ಕು ಸಾವಿರ ವರ್ಷಗಳ ಕೆಳಗೆ, ಮೆಸೊಪೊಟೆಮಿಯಾದ ಉಚ್ಛ್ರಾಯದ ದಿನಗಳಲ್ಲಿ ನಡೆಯುತ್ತಿದ್ದಂತಹ ವಾರ್ಷಿಕ ಧಾನ್ಯಗಳ ಸುಗ್ಗಿ, ಅದರೊಂದಿಗೆ, ಆ ಸುಗ್ಗಿಗೆ ಎಷ್ಟು ಖರ್ಚು ವೆಚ್ಚಗಳು ಉಂಟಾಗುತ್ತಿದ್ದವು ಹಾಗೂ ಅದನ್ನು ಹೇಗೆ ಧಾನ್ಯಗಳ ಪ್ರಮಾಣದಿಂದಲೇ ಅಳೆಯಲಾಗುತ್ತಿತ್ತು ಎಂಬಂತಹ ಮಾಹಿತಿಗಳನ್ನು ಬ್ಯಾಬಿಲೋನಿನ ಪ್ರವೇಶ ದ್ವಾರದಲ್ಲಿರುವ ಮಣ್ಣಿನ ಇಟ್ಟಿಗೆಗಳಲ್ಲಿ ಎದ್ದು ಕಾಣುವಂತೆ ಚಿತ್ರಿಸಲಾಗಿದೆ. ಸುಗ್ಗಿಯ ಪ್ರಮಾಣ ಹಾಗೂ ಖರ್ಚುವೆಚ್ಚದಲ್ಲಿನ ವ್ಯತ್ಯಾಸವು ಆ ವರ್ಷ ಉತ್ಪಾದನೆಯಾದ ಹೆಚ್ಚುವರಿ ಧಾನ್ಯದ ಪ್ರಮಾಣವನ್ನು ಸೂಚಿಸುತ್ತದೆ. ಈ ಹೆಚ್ಚುವರಿ ಧಾನ್ಯವನ್ನು ಕೃಷಿಯಲ್ಲಿ ತೊಡಗಿದ್ದ ಕುಟುಂಬಗಳನ್ನು ಮತ್ತು ಅದೇ ರೀತಿಯಲ್ಲಿ ರಾಜನ ಪರಿವಾರ, ಅವನ ಆಸ್ಥಾನದ ಕೆಲಸಗಾರರು, ಸೈನ್ಯ ಹಾಗೂ ಇನ್ನಿತರರನ್ನು ಪೋಷಿಸಲು ಬಳಸಲಾಗುತ್ತಿತ್ತು. ಹೆಚ್ಚುವರಿ ಧಾನ್ಯಗಳ ಪ್ರಮಾಣವು ಜನ ಕಲ್ಯಾಣ, ಆರ್ಥಿಕ ಉತ್ಪಾದಕತೆ ಹಾಗೂ ರಾಜಕೀಯ ಮತ್ತು ಸೈನಿಕ ಶಕ್ತಿಯ ಕುರಿತಾದ ಮಾಹಿತಿಯನ್ನು ಒದಗಿಸುತ್ತದೆ. ಈ ಮಣ್ಣಿನ ಇಟ್ಟಿಗೆಗಳು ಪ್ರಾಯಶಃ ಮಾನವ ಇತಿಹಾಸದಲ್ಲಿ ರಾಷ್ಟ್ರೀಯ ಆದಾಯದ ಮೊದಲ ವರದಿಗಳಾಗಿವೆ.

## ಗ್ರೀಕ್ ದೇಶದ ಆರ್ಥಿಕತೆ ಹಾಗೂ ಅರ್ಥಶಾಸ್ತ್ರ

ಪ್ಲೇಟೋ (ಕ್ರಿಸ್ತ ಪೂರ್ವ 427-347) ಹಾಗೂ ಆತನ ವಿದ್ಯಾರ್ಥಿಯಾದ ಅರಿಸ್ಟಾಟಲ್ (ಕ್ರಿಸ್ತ ಪೂರ್ವ 384-322) ಅವರ ಕಾಲದಲ್ಲಿ, ಗ್ರೀಸ್ ದೇಶದ ಉತ್ಪಾದನಾ ವಿಧಾನವು ಗುಲಾಮಗಿರಿಯ ಮೇಲೆ ಹಾಗೂ ನಗರ- ಪ್ರಭುತ್ವದ ರಾಜಕೀಯ ಸಂರಚನೆಯನ್ನು ಒಳಗೊಂಡ ಬಹಳ ನಿಧಾನಗತಿಯಲ್ಲಿ ಬದಲಾದಂತಹ ಸಂಪ್ರದಾಯಗಳು ಹಾಗೂ ಸಂಸ್ಥೆಗಳ ಮೇಲೆ ಆಧರಿತವಾಗಿತ್ತು. ಅಲ್ಲಿ ಪೂರ್ಣ ಪ್ರಮಾಣದ ನಾಗರಿಕರ "ಒಳ್ಳೆಯ ಜೀವನ"ಕ್ಕೆ ಹಾಗೂ ಅದಕ್ಕೆ ಪೂರಕವಾದ ನಿಯಂತ್ರಕ ಹಾಗೂ ಸಾಂಸ್ಥಿಕ ಚೌಕಟ್ಟಿಗೆ ಗಮನ ಕೊಡಲಾಗುತ್ತಿತ್ತು, ಆ ಒಳ್ಳೆಯ ಜೀವನ ಎನ್ನುವುದು ಒಂದು ಸ್ಥಗಿತಗೊಂಡಂತಹ ಪರಿಕಲ್ಪನೆಯಾಗಿತ್ತು. ಉತ್ಪಾದನೆಯು ಹೆಚ್ಚು ಕಡಿಮೆ ಆರ್ಥಿಕ ಸ್ವಾವಲಂಬಿ (ಅಟಾರ್ಕಿಕ್) ಕುಟುಂಬಗಳಲ್ಲಿ ನಡೆಯುತ್ತಿತ್ತು. ಹೀಗಾಗಿ "ಆರ್ಥಿಕತೆ" ಎನ್ನುವ ಪದವನ್ನು ಗ್ರೀಕ್ ನ *ಒಯ್ಕೋಸ್* ಅಂದರೆ "ಮನೆ" ಹಾಗೂ *ನೊಮೋಸ್* ಅಂದರೆ "ನಿಯಮ" ಎನ್ನುವ ಪದಗಳನ್ನು ಬಳಸಿ ರೂಪಿಸಲಾಗಿತ್ತು. ಹಾಗಾಗಿ *ಒಯ್ಕೊನೋಮಿಯಾ* ಎಂದರೆ ಕುಟುಂಬ ಮಟ್ಟದ ನಿರ್ವಹಣೆ ಅಥವಾ ಯಾವ ನಿಯಮಗಳನ್ನು ಅನುಸರಿಸಿ ಒಂದು ಕುಟುಂಬ ಅಥವಾ ಒಂದು ವ್ಯಾಪಾರವನ್ನು ಅತ್ಯುತ್ತಮವಾಗಿ ನಡೆಸಲಾಗುತ್ತದೆ ಎಂದು .

ಆ ಕಾಲಘಟ್ಟದಲ್ಲಿ ತತ್ವಶಾಸ್ತ್ರಜ್ಞರುಗಳು ನಡೆಸುತ್ತಿದ್ದ ಚಿಂತನೆಗಳು ವ್ಯಾಪಾರ ಹಾಗೂ ಆರ್ಥಿಕ ನಿರ್ವಹಣೆ ಇವುಗಳಿಗೆ ಸಂಬಂಧಿಸಿದ ವಿಷಯಗಳ ಸುತ್ತಲೂ ಇರುತ್ತಿದ್ದವು, ಅದರ ಉದ್ದೇಶವು ಆರ್ಥಿಕವಾಗಿ ಉಪಯುಕ್ತವಾದದ್ದನ್ನು, ನೈತಿಕವಾಗಿ ಯುಕ್ತವಾಗಿರುವ ಹಾಗೂ ರಾಜಕೀಯವಾಗಿ ಸಮಂಜಸವಾಗಿರುವುದರೊಂದಿಗೆ ಸಮನ್ವಯಗೊಳಿಸುವುದಾಗಿತ್ತು. ಅಂತಹ ವಿಷಯಗಳು ಖಾಸಗಿ ಜೀವನ ಹಾಗೂ ಸಾರ್ವಜನಿಕ ಆರ್ಥಿಕತೆ ಹಾಗೂ ಪ್ರಭುತ್ವದ ವ್ಯಾಪಾರಕ್ಕಾಗಿ ಹಣಕಾಸನ್ನು ಹೊಂದಿಸುವುದನ್ನು ಒಳಗೊಳ್ಳುತ್ತಿತ್ತು. ಆರಂಭಿಕ ಹಂತದಲ್ಲಿ ಸ್ವಯಿಚ್ಛೆಯಿಂದ ಮಾಡುವ ದಾನಗಳು, ವಸಾಹತುಗಳಿಂದ ಸಂಗ್ರಹಿಸುತ್ತಿದ್ದ ಕಪ್ಪ ಕಾಣಿಕೆಗಳು ಮತ್ತು ನಾಗರಿಕರಿಂದ ಪಡೆದುಕೊಳ್ಳುತ್ತಿದ್ದ ಸೇವೆಗಳು ಇವುಗಳಿಂದ ಪ್ರಭುತ್ವದ ವೆಚ್ಚವನ್ನು

ಹೊಂದಿಸಲಾಗುತ್ತಿದ್ದರೂ, ಕಾಲ ಕಳೆದಂತೆ ಕಡ್ಡಾಯ ಕಾಣಿಕೆಗಳು ಹೆಚ್ಚಾಗತೊಡಗಿದವು - ಮೊದಲಿಗೆ ನಾಗರಿಕತ್ವವಿಲ್ಲದೆ ಬಂದು ನೆಲೆಸಿದ್ದ ವಲಸಿಗ ನಗರವಾಸಿಗಳಿಂದ ಇದಕ್ಕಾಗಿ ತೆರಿಗೆಯನ್ನು ವಸೂಲಿ ಮಾಡಲಾಗುತ್ತಿತ್ತು ಮತ್ತು ಅಂತಿಮವಾಗಿ ನಾಗರಿಕರಿಂದಲೂ ಸಹ ವಸೂಲಿ ಮಾಡಲಾಯಿತು. ತೆರಿಗೆಯು ಸಂಪತ್ತನ್ನು ಆಧರಿಸಿದ್ದರೆ ಸಂಪತ್ತನ್ನು ನಿಗದಿಪಡಿಸುವುದು ಹೇಗೆ ಎಂಬ ಪ್ರಶ್ನೆಯು ಉದ್ಭವಿಸಿ, ಅದು ಕಣ್ಣಿಗೆ ಕಾಣುವ ಮತ್ತು ಕಾಣಲಾಗದ (ಅಥವಾ ಗುಪ್ತವಾಗಿಡಲಾಗುವ) ಸಂಪತ್ತು ಎಂಬ ವ್ಯತ್ಯಾಸ ಗುರುತಿಸುವಿಕೆಗೆ ಕಾರಣವಾಯಿತು. ಮನೆಗಳು, ಜಮೀನುಗಳು, ತೋಟಗಳು, ಉಪಕರಣಗಳು ಹಾಗೂ ಕೆಲಸಕ್ಕೆ ತೊಡಗಿಸಲಾಗುವ ಪ್ರಾಣಿಗಳು ಮುಂತಾದ ಕಣ್ಣಿಗೆ ಕಾಣುವ ಸಂಪತ್ತಿನ ಮೇಲೆ ವಿಧಿಸಲಾದ ತೆರಿಗೆಗಳಿಂದ ತಪ್ಪಿಸಿಕೊಳ್ಳುವುದು, ಹಣ ಮತ್ತು ಸಾಲ ನೀಡುವ ವ್ಯವಹಾರಗಳಲ್ಲಿ ದೊರಕುವ ಬಡ್ಡಿಯಂತಹ ಕಣ್ಣಿಗೆ ಕಾಣದ ಸಂಪತ್ತಿನ ಮೇಲೆ ವಿಧಿಸಲಾಗುವ ತೆರಿಗೆಗಳಿಂದ ತಪ್ಪಿಸಿಕೊಳ್ಳುವುದಕ್ಕಿಂತ ಕಷ್ಟವಾಯಿತು. 19ನೆಯ ಶತಮಾನದವರೆಗೂ ರೋಮನ್ ಕ್ಯಾಥೋಲಿಕ್ ಚರ್ಚಿನಲ್ಲಿ (ಇದೇ ಅಧ್ಯಾಯದಲ್ಲಿ  ಸ್ಕೊಲಾಸ್ಟಿಸಮ್ ಕುರಿತು ಇರುವ ಭಾಗವನ್ನು ಗಮನಿಸಿರಿ) ಇದ್ದಂತಹ ಮತ್ತು ಇಸ್ಲಾಮಿನ ಜಗತ್ತಿನಲ್ಲಿ ಇಂದಿಗೂ ಇರುವಂತಹ ಆರ್ಥಿಕ ಚಿಂತನೆಯಲ್ಲಿ ಕಂಡುಬರುವ ಸಾಲ ಮತ್ತು ಬಡ್ಡಿಗೆ ವಿರುದ್ಧವಾಗಿ ಇರುವಂತಹ ಭಾವನೆಗಳ ಒಂದು ಮೂಲ ಅಂಶವು ಪ್ರಾಯಶಹ ಇಲ್ಲಿದೆ.

## ಪ್ಲೇಟೋ

ಶ್ರೀಮಂತ ಕುಟುಂಬದ ಪುತ್ರನಾದ ಪ್ಲೇಟೋ, ಕುಟುಂಬದ ನಿರ್ವಹಣೆ ಮತ್ತು ಪೊಲಿಸ್ ಎಂದು ಕರೆಯಲ್ಪಡುತ್ತಿದ್ದ ಪ್ರಭುತ್ವದ ನಿರ್ವಹಣೆ ಎರಡು ಕೂಡ ಆಪ್ತವಾದ ಸಂಬಂಧವನ್ನು ಹೊಂದಿವೆ ಎಂಬುದನ್ನು  ನೋಡಿದ್ದನು. ಎರಡು  ಸನ್ನಿವೇಶಗಳಲ್ಲಿಯೂ ಸಹ ಇದ್ದಂತಹ ಮುಖ್ಯ ಅಂಶವೆಂದರೆ ಒಡೆಯನ ಮೇಲ್ವಿಚಾರಣೆಗೆ ಒಪ್ಪಿಸಿದ ಜನರ ಕಲ್ಯಾಣ - ಆ ಒಡೆಯನು ಮನೆಯ ಯಜಮಾನನಿರಬಹುದು ಅಥವಾ ಪ್ರಭುತ್ವದ ಆಡಳಿತಗಾರನಿರಬಹುದು. ಈ ಕಲ್ಯಾಣ ಎನ್ನುವುದರಲ್ಲಿ ಒಂದು ವಾಸ್ತವಿಕ ಭಾಗವಿದ್ದು, ಅದು ಒಂದು ಗುರಿಗೆ ಎಂದರೆ ಉತ್ತಮ ಬದುಕಿಗೆ ಸಾಧನವಾಗಿತ್ತೇ  ಹೊರತು ಅದು ತಾನೇ ಸ್ವತಹ ಒಂದು ಗುರಿಯಾಗಿರಲಿಲ್ಲ. ಪ್ಲೇಟೋನು ತನ್ನ 'ದಿ ರಿಪಬ್ಲಿಕ್' (ಆದರ್ಶ ಗಣರಾಜ್ಯ) ಎಂಬ ಗ್ರಂಥದಲ್ಲಿ ಒಂದು ಆದರ್ಶ ಪ್ರಭುತ್ವದ ಮುಖ್ಯ ಲಕ್ಷಣಗಳು ಏನು ಎಂಬುದನ್ನು ವಿವರಿಸಿದನು; ಆ ಪರಿಕಲ್ಪನೆಯು ಇತಿಹಾಸದಲ್ಲಿ ವಿಶದೀಕರಿಸಲ್ಪಟ್ಟ ಪ್ರಪ್ರಥಮ ಸಾಮಾಜಿಕ ಆದರ್ಶ ಗಣರಾಜ್ಯ. ಪ್ಲೇಟೋನ ಗಮನವಿದ್ದದ್ದು ನೈತಿಕ ರೂಢಿಗಳನ್ನು ವಾಸ್ತವೀಕರಿಸುವುದರಲ್ಲಿ,  ನಿಜವಾಗಿ ಉತ್ತಮವಾದದ್ದನ್ನು ಗಳಿಸಿಕೊಳ್ಳುವುದರಲ್ಲಿ. ಈ ಗುರಿಗಾಗಿ ನಡೆಸುವ ಪ್ರಯತ್ನವು ಕಠೋರ ನಿಬಂಧನೆಗಳನ್ನು ಅನುಸರಿಸುವುದನ್ನು ಮತ್ತು ಇದನ್ನು ಮೀರುವವರಿಗೆ ಶಿಕ್ಷೆಯನ್ನು ಆಗ್ರಹಿಸುತ್ತಿತ್ತು (ಹೀಗಾಗಿ ಪ್ಲೇಟೋನ ನೀಲ ನಕ್ಷೆಯಲ್ಲಿ ಸರ್ವಾಧಿಕಾರಿ ಲಕ್ಷಣಗಳಿತ್ತು ಎಂದು ಹೇಳಲಾಗುತ್ತದೆ ಮತ್ತು ಆತನ ಕಲ್ಪನೆಯಲ್ಲಿನ ಸಾಮಾಜಿಕ ಪಿರಮಿಡ್‌ನ ತುತ್ತತುದಿಯಲ್ಲಿ  ಎಲ್ಲರಿಗೂ ಸೇರುವ ಅಸ್ತಿ ಮಾತ್ರ ಇರುವುದರಿಂದ ಅದನ್ನು ಒಂದು ರೀತಿಯ ಆದಿಮ ಸಮತಾವಾದ ಎಂದು ಸಹ ವ್ಯಾಖ್ಯಾನಿಸಲಾಗಿದೆ).

ಈ ರೀತಿ ಹಂತಗಳಾಗಿ ವಿಭಾಗಿಸಲ್ಪಟ್ಟ, ಶ್ರೇಣಿಕೃತವಾದ ಸಮಾಜವೊಂದು ತನ್ನನ್ನೇ ತಾನು ಮರುಸೃಷ್ಟಿ ಮಾಡಿಕೊಳ್ಳಲು ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಅನುಗುಣವಾದ ಸ್ಥಳದಲ್ಲಿಯೇ ಇರಬೇಕು ಎಂದು ಪ್ಲೇಟೋ ಪ್ರತಿಪಾದಿಸಿದನು. ಇಂತಹ ಒಂದು ಆದರ್ಶ ಗಣರಾಜ್ಯದ ಶಿಖರದಲ್ಲಿ ತತ್ವಶಾಸ್ತ್ರಜ್ಞರು ಅಥವಾ ದಾರ್ಶನಿಕ ಮಹಾರಾಜರು ಇರಬೇಕು, ಅವರ ಕೆಳಗೆ ಸಮಾಜದ ಸಂರಕ್ಷಕರು ಇರುತ್ತಾರೆ, ಅವರು ಕೇವಲ ಪುರುಷ ಭ್ರಾತೃತ್ವ ಇರುವ ಸಮುದಾಯವೊಂದರ ಸದಸ್ಯರಾಗಿ ಬದುಕುತ್ತಿದ್ದು  ಪೂರ್ಣ ಪ್ರಮಾಣದ ನಾಗರಿಕರಾಗಿರುತ್ತಾರೆ ಎಂದು ಆತ ನಿಗದಿಪಡಿಸಿದನು. ಪ್ರಭುತ್ವವನ್ನು ಒಂದು ಯುದ್ಧ ಸನ್ನದ್ಧ ಸಮುದಾಯವು ರಕ್ಷಿಸುತ್ತದೆ ಮತ್ತು ಅದು ನಿಜವಾಗಿಯೂ ಒಳ್ಳೆಯದನ್ನು ರಕ್ಷಿಸುವಂತಿದ್ದರೆ ಅವರು ಗೆಲುವಿಗಾಗಿ ಮಾಡುವ ಯುದ್ಧಗಳು

ನ್ಯಾಯಯುತವಾದದ್ದು ಎಂದು ಪ್ಲೇಟೋ ವಾದಿಸುತ್ತಾನೆ. ಈ ಯೋಧರಿಗಿಂತ ಕೆಳಗೆ ಕುಶಲಕರ್ಮಿಗಳು, ವ್ಯಾಪಾರಸ್ಥರು ಮತ್ತು ಮೆಟಿಕ್ಸ್ (ದೇಶೀಯರಲ್ಲದ/ಸ್ಥಳೀಯರಲ್ಲದ) ಎಂಬ ಹಕ್ಕುಗಳಿಲ್ಲದ ನಾಗರಿಕರು (ಮತ್ತು ಅವರ ಗುಲಾಮರು) ಇರುತ್ತಾರೆ. ಸಂಪೂರ್ಣ ನಾಗರಿಕರು (ಮತ್ತು ಅವರ ಗುಲಾಮರು) ಈ ವೃತ್ತಿಗಳನ್ನು ಮಾಡದಂತೆ ನಿಷೇಧಿಸಲಾಗಿತ್ತು. ಖಾಸಗಿ ಆಸ್ತಿಗೆ ಇಲ್ಲಿ ಅನುಮತಿ ಇದ್ದರೂ ಸಹ ಲಾಭದ ಗಳಿಕೆಯ ಬಗ್ಗೆ ತಿರಸ್ಕಾರವಿತ್ತು ಏಕೆಂದರೆ ಪ್ಲೇಟೋ ಸಂಪತ್ತು ಎಂಬುದು ಮನುಷ್ಯನನ್ನು ಭ್ರಷ್ಟಗೊಳಿಸುತ್ತದೆ ಮತ್ತು ಸಂಪತ್ತು ಅಧಿಕಾರವಾಗಿ ಪರಿವರ್ತಿತವಾಗಿ ಕೊನೆಗೆ ಸರ್ವಾಧಿಕಾರದಲ್ಲಿ ಕೊನೆಯಾಗುತ್ತದೆ ಎಂದು ಭಾವಿಸಿದ್ದನು. ಆದ್ದರಿಂದ ಪ್ಲೇಟೋ ಈ ಅಪಾಯವನ್ನು ದೂರ ಮಾಡಲು ಆಸ್ತಿಯನ್ನು ಮರುಹಂಚಿಕೆ ಮಾಡಬೇಕು ಎಂದು ವಾದಿಸಿದನು.

ತನ್ನ 'ರಿಪಬ್ಲಿಕ್' ಗ್ರಂಥದಲ್ಲಿ ಪ್ಲೇಟೋ ಕಲ್ಪಿಸಿಕೊಂಡ ಸಾಮಾಜಿಕ ಶ್ರೇಣೀಕರಣಕ್ಕೂ ಮತ್ತು ಗಣರಾಜ್ಯದ ಆಧಾರವಾಗಿ ಆತನು ಪರಿಭಾವಿಸಿದ ಶ್ರಮದ ವಿಭಜನೆಗೂ ನಡುವೆ ಹತ್ತಿರದ ಸಂಬಂಧವಿದೆ. ಆತನ ಮೂಲಭೂತ ಅಭಿಪ್ರಾಯವೆಂದರೆ ಒಬ್ಬ ಮನುಷ್ಯನ ಸಹಜ ಆಸಕ್ತಿಗಳು ಮತ್ತು ಪ್ರತಿಭೆಗಳು ಸಮಾಜದಲ್ಲಿ ಆತನ ಸ್ಥಾನವನ್ನು ನಿರ್ಧರಿಸಬೇಕು ಎಂಬುದು. ಪ್ರತಿಯೊಬ್ಬರೂ ತಾವು ಯಾವುದನ್ನು ಚೆನ್ನಾಗಿ ಮಾಡಬಲ್ಲರೋ ಅದನ್ನೇ ಮಾಡುತ್ತಾ ಹೋದರೆ ಆಗ ಮಾಡಲ್ಪಟ್ಟ ಕಾರ್ಯಗಳೆಲ್ಲವೂ ಕೂಡ ಚೆನ್ನಾಗಿರುತ್ತವೆ. ಹೀಗಾಗಿ ಪ್ಲೇಟೋನ ಮೂಲಭೂತ ಕಾಳಜಿ ಇರುವುದು ಸಹಜ ಪ್ರತಿಭೆಗಳನ್ನು ಸರಿಯಾದ ರೀತಿಯಲ್ಲಿ ನಿಯೋಜಿಸಬೇಕು ಮತ್ತು ನಿರ್ವಹಿಸಬೇಕು ಎಂಬುದೇ ಹೊರತು (ನಂತರದ ದಿನಗಳಲ್ಲಿ ಆಡಂ ಸ್ಮಿತ್ ಭಾವಿಸಿದಂತೆ), ಶ್ರಮವಿಭಜನೆಯಿಂದ ಉತ್ಪಾದನೆ ಹೆಚ್ಚಾಗುವಂತಹ ಪರಿಣಾಮ ಉಂಟಾಗುತ್ತದೆ ಎಂಬುದಲ್ಲ. ಮನುಷ್ಯರ ಆಸಕ್ತಿಗಳಲ್ಲಿ ಸಹಜವಾಗಿ ಕಂಡುಬರುವಂತಹ ಭೇದಗಳನ್ನು ವಿಶೇಷ ತಿಳಿವಳಿಕೆ ಅಥವಾ ಕೆಲಸದ ಮೂಲಕ ಕಲಿಯುವಿಕೆಯ ಪ್ರಕ್ರಿಯೆಯು ಬಲಪಡಿಸಬಹುದು ಅಥವಾ ಅದಕ್ಕೆ ತೊಡಕಾಗಬಹುದು ಎಂಬುದನ್ನು ಪ್ಲೇಟೋ ಕೇವಲ ಅಪರೂಪವಾಗಿ ಹೆಸರಿಸುತ್ತಾನೆ.

ಆತ ಸಾಮಾಜಿಕ ಮತ್ತು ವೃತ್ತಿ ಸಂಬಂಧಿತ ಶ್ರೇಣೀಕರಣವನ್ನು ಚಲನಶೀಲ ಎಂದು ಕಾಣದೆ ಅದೊಂದು ಜಡವಾದ ಅಂಶ ಎಂಬಂತೆ ಭಾವಿಸಿದನು. ಅವನ ಪ್ರಕಾರ ಸಮಾಜದಲ್ಲಿ ಮಾಡಲ್ಪಡುವ ಅನೇಕ ರೀತಿಯ ಶ್ರಮಗಳ ನಡುವಿನ ಸಮನ್ವಯವು ಭಾಗಶಃ ಆಜ್ಞೆಗಳು ಮತ್ತು ಕೇಂದ್ರೀಕೃತ ಅಧಿಕಾರಶಾಹಿಯ ಮೂಲಕ (ಸೈನ್ಯದಲ್ಲಿ ಇದ್ದಂತೆ) ಮತ್ತು ಭಾಗಶಃ ಮಾರುಕಟ್ಟೆಗಳ ಮೂಲಕ ನಡೆಯುತ್ತದೆ.

ತನ್ನ ರಿಪಬ್ಲಿಕ್ ಗ್ರಂಥದಲ್ಲಿ ಪ್ಲೇಟೋ, ಹಣವು ಕೇವಲ ಒಂದೇ ಒಂದು ಉದ್ದೇಶವನ್ನು ಪೂರೈಸಬೇಕು ಅದೆಂದರೆ ನಗದು ವ್ಯವಹಾರ ಎಂದು ಆಗ್ರಹಿಸಿದನು.. ಅದನ್ನು ಮೌಲ್ಯವನ್ನು ಸಂಗ್ರಹಿಸಿಡುವ ಮತ್ತು ತನ್ಮೂಲಕ ಕಳ್ಳದಾಸ್ತಾನು ಮಾಡುವ ಸಾಧನವಾಗಿ ಉಪಯೋಗಿಸಬಾರದು, ಏಕೆಂದರೆ ಸಂಪತ್ತಿನ ಸಂಗ್ರಹಕ್ಕೆ ಯಾವುದೇ ಅಂತಿಮ ಮಿತಿ ಎಂಬುದು ಇರುವುದಿಲ್ಲ, ಆದ್ದರಿಂದ ಅದು ಅಸ್ವಾಭಾವಿಕವಾಗುತ್ತದೆ. ಬಡ್ಡಿ ವಸೂಲಿಯೂ ಸಹ ಸರಿಯಲ್ಲ ಎಂದು ಆತನು ಅದನ್ನು ದ್ವೇಷಿಸಿದನು. ಬೆಲೆಗಳು ತೀರ್ಮಾನವಾಗುವುದು ಹೇಗೆ ಎಂಬುದರ ಬಗ್ಗೆ ಮತ್ತು ಉತ್ಪಾದಕರು ಹಾಗೂ ವ್ಯಾಪಾರಸ್ಥರ ಆದಾಯಗಳ ಬಗ್ಗೆ ಅವನು ಯಾವುದೇ ವಿವರವಾದ ಚಿಂತನೆಯನ್ನು ಮುಂದಿಡಲಿಲ್ಲ.

**ಅರಿಸ್ಟಾಟಲ್**

ಅರಿಸ್ಟಾಟಲ್‌ನು ಮೆಟಿಕ್ಸ್‌ಗಳ ಶ್ರೇಣಿಯಿಂದ ಬಂದವನಾಗಿದ್ದು, ತನ್ನ ಗುರು ಪ್ಲೇಟೋನ ಎಲ್ಲ ವಿಷಯಗಳಲ್ಲೂ ಸಹಮತವನ್ನು ಹೊಂದಿರಲಿಲ್ಲ. ಉದಾಹರಣೆಗೆ ಅರಿಸ್ಟಾಟಲ್‌ನು ಅವನ ನಂತರದ ಚಿಂತಕರಲ್ಲಿ ಕಾಣಿಸಿಕೊಳ್ಳುವ ವಾದವನ್ನೇ ಖಾಸಗಿ ಆಸ್ತಿಗೆ ಸಂಬಂಧಿಸಿದಂತೆ ಮಂಡಿಸಿದನು. ಅದೇಂದರೆ ಜನರು ತಮ್ಮದೇ ಆದ ಆಸ್ತಿಯನ್ನು, ಎಲ್ಲರಿಗೂ ಸೇರಿದ ಸಾಮಾನ್ಯ ಆಸ್ತಿಯನ್ನು ಉಪಯೋಗಿಸುವುದಕ್ಕಿಂತ ಹೆಚ್ಚು ಜತನದಿಂದ ಉಪಯೋಗಿಸುತ್ತಾರೆ ಎಂಬುದು. ಇದು 'ಸಾಮಾನ್ಯ ಜನರ ಸಮಸ್ಯೆ' ಎಂಬ ಪ್ರತಿಪಾದನೆಯಾಗಿ ಹೆಸರುವಾಸಿಯಾಗಿದೆ.

ಅರಿಸ್ಟಾಟಲ್ ನ ಅಭಿಪ್ರಾಯಗಳು ಸ್ವಯಂ ಪೂರ್ಣವಾದ ಕೌಟುಂಬಿಕ ಆರ್ಥಿಕತೆಯ ಸಂಘಟನೆ ಮತ್ತು ನಿರ್ವಹಣೆಯ ಸುತ್ತಲೂ ಸುತ್ತುತ್ತವೆ. ಉದಾಹರಣೆಗೆ: ಒಡೆಯನ, ತಂದೆಯ, ಮಡದಿಯ, ಮಕ್ಕಳ ಮತ್ತು ಗುಲಾಮರ ಹಕ್ಕುಗಳು ಮತ್ತು ಬಾಧ್ಯತೆಗಳು ಯಾವುವು? ಅರಿಸ್ಟಾಟಲ್‌ನ ಪ್ರಕಾರ, ತಮ್ಮ ಭೌತಿಕ ಕಲ್ಯಾಣದ ಬಗ್ಗೆ ಯಾವುದೇ ಕಾಳಜಿ ತೆಗೆದುಕೊಳ್ಳಬೇಕಾದ ತೊಂದರೆಯಿಂದ ಬಿಡುಗಡೆ ಮಾಡಲ್ಪಟ್ಟ ನಾಗರಿಕರ ಮತ್ತು ದಾರ್ಶನಿಕರ ಉತ್ತಮ ಜೀವನಕ್ಕಾಗಿ ಗುಲಾಮರು - ಮನುಷ್ಯರನ್ನು ಆಸ್ತಿ ಎಂಬಂತೆ ನಡೆಸಿಕೊಳ್ಳುವುದು ನೈತಿಕವೇ ಎಂದು ಅವರ ಸ್ಥಾನಮಾನದ ಬಗ್ಗೆ ಈತನಿಗೆ ಕೊಂಚ ತಕರಾರಿದ್ದರೂ - ಅನಿವಾರ್ಯ ಎಂಬುದು ಈತನ ತೀರ್ಮಾನ.

ಪ್ಲೇಟೋ ನಂತೆ ಅರಿಸ್ಟಾಟಲ್‌ನೂ ಸಹ, ಯಾವ ಕೆಲಸದ ಮೂಲಕ ಕುಟುಂಬಗಳು ಮತ್ತು ಮನುಷ್ಯರು ಬದುಕನ್ನು ನಡೆಸುತ್ತಾರೋ ಹಾಗೂ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾರೋ ಅಂತಹ ಸಂಪಾದನೆ ಮಾಡುವ ವಿಭಿನ್ನ ಕಲೆಗಳ ನಡುವೆ ವ್ಯತ್ಯಾಸವನ್ನು ಗುರುತಿಸಿದನು. ಅದರ ಸ್ವಾಭಾವಿಕ ಸ್ವರೂಪವು ( ಒಯ್ಕಿನೋಮಿಕೆ), ಗ್ರೀಕ್ ನಾಗರಿಕನಿಗೆ ಮತ್ತು ಆತನ ಕುಟುಂಬಕ್ಕೆ ವಸ್ತುಗಳನ್ನು ಉತ್ಪಾದಿಸುವುದು ಮತ್ತು ಪಡೆದುಕೊಳ್ಳುವುದರ ಮೂಲಕ ಉತ್ತಮ ಬದುಕನ್ನು ನಡೆಸಲು ಸಾಮರ್ಥ್ಯ ನೀಡುತ್ತಿತ್ತು. ಅರಿಸ್ಟಾಟಲ್ ಪ್ರಕೃತಿಯು ಒಳ್ಳೆಯದು ಎಂಬುದಕ್ಕೆ ಮಿತಿಯನ್ನು ಹಾಕಿರುತ್ತದೆ ಮತ್ತು ಅದರಿಂದಾಗಿ ಈ ರೀತಿ ಸಂಪಾದನೆ ಮಾಡುವ ಕಲೆಗೆ ಒಂದು ಮಿತಿಯುಳ್ಳ ಗುರಿ ಇರುತ್ತದೆ ಎಂದು ಭಾವಿಸಿದನು. ಹರ್ಬರ್ಟ್ ಸೈಮನ್ (1916- 2001) ಎಂಬಾತನು ಉಪಯೋಗಿಸಿದ 'ತೃಪ್ತಿಪಡಿಸುವಂಥದ್ದು' ಎಂಬ ಪದವನ್ನು ಇದಕ್ಕೆ ಹತ್ತಿರದ ಪರ್ಯಾಯ ಪದವೆಂದು ಉಪಯೋಗಿಸಬಹುದು: ಈ ಪದದ ಅರ್ಥವು ಒಬ್ಬ ಮನುಷ್ಯನು ಸಮಾಜದಲ್ಲಿ ತನಗಿರುವ ಸ್ಥಾನಮಾನಕ್ಕೆ ಅನುಗುಣವಾಗಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುವುದು ಎಂದಾಗುತ್ತದೆಯೇ ಹೊರತು ಸಂಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಏರಿಸಿಕೊಳ್ಳಲು ಪ್ರಯತ್ನಿಸುವುದು ಎಂದಲ್ಲ.

ಅರಿಸ್ಟಾಟಲ್‌ನು ಇಂತಹ ಸಹಜ ಸ್ವರೂಪದ ಸಂಪಾದನೆ ಅಥವಾ ಗಳಿಕೆಯನ್ನು ಅಸಹಜವಾದ ಸಂಪಾದನೆಯ ಕಲೆ ಅಥವಾ ಕ್ರೀಮಾಟಿಸ್ಟಿಕ್ಸ್ (ಧನದಾಹ) ಎಂಬುದರೊಂದಿಗೆ ಹೋಲಿಸುತ್ತಾನೆ (ಕ್ರೀಮಾ ಎಂದರೆ ಹಣ). ಇದು ಸಂಪತ್ತಿನ ಗಳಿಕೆಯ ಗುರಿಯನ್ನು, ಎಂದರೆ ಗಳಿಕೆಗಾಗಿ ಗಳಿಕೆ ಎನ್ನುವಂತಹ ಸಂಪಾದನೆಯನ್ನು ಪೂರೈಸುತ್ತದೆ. ಇದು ಆತನ ಪ್ರಕಾರ ಅಸಹಜ, ಏಕೆಂದರೆ ಇದಕ್ಕೆ ಮಿತಿ ಎಂಬುದಿಲ್ಲ. ಕ್ರೀಮಾಟಿಸ್ಸ್ಟಿಕ್ಸ್ ಅನ್ನು, ವಿನಿಮಯವನ್ನು ಸುಲಭಗೊಳಿಸಲು ಹೊರಹೊಮ್ಮಿದ ವ್ಯಾಪಾರ ಮತ್ತು ಹಣದ ಜೊತೆಯಲ್ಲಿ ಸಂಬಂಧವಿರುವಂಥದ್ದು ಎಂದು ಗುರುತಿಸುತ್ತಾನೆ. ಆದರೆ ಹಣವು ಸಹ ಮೌಲ್ಯವನ್ನು ಸಂಗ್ರಹ ಮಾಡುವುದಕ್ಕೆ ನೆರವಾಗುವುದರಿಂದ ಅದೇ ಒಂದು ಗುರಿಯಾಗಿಬಿಡುವ ಸಾಧ್ಯತೆಯಿರುತ್ತದೆ. ಗ್ರೀಕ್ ಪುರಾಣದ ಮೈದಾಸ ರಾಜನ ಕಥೆಯು ತೋರಿಸಿ ಕೊಡುವಂತೆ ಅತಿ ಹೆಚ್ಚು ಸಂಪತ್ತನ್ನು ಗಳಿಸಬೇಕೆಂದು ಪ್ರಯತ್ನಿಸುವ ಮನುಷ್ಯನು ಹಸಿವಿನಿಂದ ಸಾಯುವಂತಹ ಅಪಾಯಕ್ಕೆ ತುತ್ತಾಗುತ್ತಾನೆ- ಏಕೆಂದರೆ ಅವನು ಮುಟ್ಟಿದ್ದೆಲ್ಲವೂ ಚಿನ್ನವಾಗುತ್ತದೆ! ಅರಿಸ್ಟಾಟಲ್‌ನು ಸಾಲ ಮತ್ತು ಬಡ್ಡಿಯ ವ್ಯವಹಾರಗಳನ್ನು ಅತ್ಯಂತ ತಿರಸ್ಕಾರಾರ್ಹವಾದ ಕ್ರೀಮಾಟಿಸ್ಟಿಕ್ಸ್ (ಧನದಾಹದ) ಸ್ವರೂಪಗಳು ಎಂದು ಕಂಡನು.

ಅವನ ಪಾಲಿಗೆ ಪ್ರತಿಯೊಂದು ರೀತಿಯ ಬಡ್ಡಿಯೂ ಸಹ ಲೇವಾದೇವಿಯೇ, ಏಕೆಂದರೆ ಅದು "ಹಣದಿಂದಲೇ ಲಾಭವನ್ನು ಮಾಡುವಂತಹದ್ದು".

ನ್ಯಾಯ ಎಂಬ ಪರಿಕಲ್ಪನೆಯು ಅರಿಸ್ಟಾಟಲ್‌ನ ಕೃತಿಗಳಲ್ಲಿ ಎಲ್ಲೆಡೆಯೂ ಕಾಣುವಂತಹದ್ದು. ಅದನ್ನು ಆತನ 'ನಿಕೋಮಾಚೆನ್ ಎಥಿಕ್ಸ್' ಎಂಬ ಪುಸ್ತಕದಲ್ಲಿ ಆತ ಮಾರುಕಟ್ಟೆಗಳ ಕುರಿತು ನೀಡಿರುವ ಹೇಳಿಕೆಗಳಲ್ಲಿಯೂ ಗಮನಿಸಬಹುದು. ಆ ಕೃತಿಯಲ್ಲಿ ಚರ್ಚಿಸಲಾಗಿರುವ ಒಂದು ವಿಷಯವೆಂದರೆ ವಿತರಣಾ ನ್ಯಾಯ. ಅರಿಸ್ಟಾಟಲ್‌ನು, ಒಂದು ವಸ್ತುವಿನ ಉಪಯೋಗ ಮೌಲ್ಯ ಮತ್ತು ವಿನಿಮಯ ಮೌಲ್ಯಗಳ ಮಧ್ಯದ ವ್ಯತ್ಯಾಸವನ್ನು ಗುರುತಿಸುತ್ತಾನೆ: ಮೊದಲನೆಯದು ಆ ವಸ್ತುವಿಗೆ ಕೆಲವೊಂದು  ಅಗತ್ಯಗಳನ್ನು ಪೂರೈಸುವಲ್ಲಿ ಇರುವ ವಾಸ್ತವಿಕ ಉಪಯುಕ್ತತೆಯನ್ನು ಕುರಿತಾದದ್ದು ಮತ್ತು ಎರಡನೆಯದು ಆ ವಸ್ತುವನ್ನು ವಿನಿಮಯಕ್ಕೆ ಒಡ್ಡಿದಾಗ ದೊರೆಯುವ ಹಣ ಅಥವಾ ಇತರ ವಸ್ತುಗಳ ಪರಿಮಾಣವನ್ನು ಕುರಿತಾದದ್ದು. ನಿಕೋಮಾಚೆನ್ ಕೃತಿಯ ಪ್ರಕಾರ ಉತ್ಪಾದಕನ ಗಮನ ಇರಬೇಕಾದದ್ದು ಆ ವಸ್ತುವಿನ ಉಪಯೋಗ ಮೌಲ್ಯದ ಗುಣಮಟ್ಟದ ಕುರಿತಾಗಿಯೇ ಹೊರತು, ಅದು ತರಬಹುದಾದ ವಿನಿಮಯ ಮೌಲ್ಯದ ಪರಿಮಾಣದ ಬಗ್ಗೆ ಅಲ್ಲ.

ಪ್ಲೇಟೋನಂತೆಯೇ ಅರಿಸ್ಟಾಟಲ್ ಸಹ ಬೆಲೆಗಳನ್ನು ಹೇಗೆ ನಿಗದಿ ಮಾಡಲಾಗುತ್ತದೆ ಎನ್ನುವ ಬಗ್ಗೆ ಯಾವುದೇ ಧನಾತ್ಮಕ ವಿಶ್ಲೇಷಣೆಯನ್ನು ಒದಗಿಸಲಿಲ್ಲ. ಬದಲಿಗೆ ಆತ ಬೆಲೆಗಳು ಅನುಸರಿಸಬೇಕಾದ ಒಂದು ನಿಯಮವನ್ನು (ನಾರ್ಮ್) ಪ್ರತಿಪಾದಿಸಿದನು. ಆ ನಿಯಮವು ಹೇಳುವುದೇನೆಂದರೆ ಬೆಲೆಗಳು ಸಮರ್ಪಕವಾದ ಸಂಪತ್ತಿನ ವಿತರಣೆಯನ್ನು ಮತ್ತು ಗೌರವವನ್ನು ಖಾತ್ರಿಪಡಿಸಬೇಕು ಎಂದು (ಇದು ಶ್ರೇಣೀಕೃತವಾದ ಗ್ರೀಕ್ ಸಮಾಜದಲ್ಲಿನ ಸುಭದ್ರತೆ ಮತ್ತು ಪುನರುತ್ಪಾದನೆಯನ್ನು ಹೋಲುತ್ತದೆ). ಎಂದರೆ ವಿನಿಮಯ ವ್ಯವಹಾರಗಳಲ್ಲಿ ತೊಡಗುವ, ಭಾಗವಹಿಸುವ ವ್ಯಕ್ತಿಗಳ ಸಾಮಾಜಿಕ ಸ್ಥಾನಮಾನವನ್ನು ಅದು ಗೌರವಿಸಬೇಕು ಮತ್ತು ಮಾರುಕಟ್ಟೆಯು ಅದನ್ನೇ ಪುನರುತ್ಪಾದಿಸಬೇಕು. ಇದನ್ನು ನಮ್ಮ ಕಾಲಕ್ಕೆ ಅನ್ವಯಿಸಿ, ಜೋಸೆಫ್ ಸ್ಟಿಗ್ಲಿಟ್ಸ್ (ಜನನ 1943) ನೀಡುವ ಉದಾಹರಣೆಯನ್ನು ಬಳಸಿ ಹೇಳಬೇಕೆಂದರೆ, ಬ್ಯಾಂಕ್ ಗುಮಾಸ್ತರು,  ತಮ್ಮನ್ನು, ತಮ್ಮ ಕುಟುಂಬವನ್ನು ಪೋಷಿಸಿಕೊಳ್ಳಲು, ಸರಿಯಾದ ಮನೆಯಲ್ಲಿ ವಾಸ ಮಾಡಲು ಮತ್ತು ಬ್ಯಾಂಕಿನ ಕೆಲಸಕ್ಕೆ ಸೂಕ್ತ ಪೋಷಾಕಿನಲ್ಲಿ ಬರುವಂತಾಗಲು ಅವರಿಗೆ ಯೋಗ್ಯವಾದ ಸಂಬಳವನ್ನು ಒದಗಿಸಬೇಕು. ಈ ರೀತಿಯಲ್ಲಿ ಆರ್ಥಿಕತೆಯು ಪ್ರಭುತ್ವವು ಯಾವ ತತ್ವಗಳನ್ನು ಆಧರಿಸಿದೆಯೋ ಅದರ ಅನುವರ್ತಿಯಾಗಿರುತ್ತದೆ. ಸಮಾಜದಲ್ಲಿನ ಶ್ರೇಣೀಕರಣವು ದೈಹಿಕ ಶ್ರಮ ಕುರಿತಾದ ಅರಿಸ್ಟಾಟಲ್‌ನ ನಿಲುವಿನಲ್ಲಿಯೂ ಪ್ರತಿಬಿಂಬಿತವಾಗಿದೆ; ಆತನ ಪ್ರಕಾರ ಸಮಾಜದ ಕೆಳಗಿನ ಶ್ರೇಣಿಗಳಲ್ಲಿರುವವರು ಮತ್ತು ಗುಲಾಮರು ಮಾಡುವಂತಹ ಮತ್ತು ಉನ್ನತ ಶ್ರೇಣಿಗಳು ತಿರಸ್ಕಾರದಿಂದ ಕಾಣುವಂತಹ ಆ ಕೆಲಸದಲ್ಲಿ ಘನತೆ ಇಲ್ಲ,ಆದ್ದರಿಂದ ಅದಕ್ಕೆ ಮೌಲ್ಯವೂ ಇಲ್ಲ.

ಗ್ರೀಕ್ ತತ್ವಶಾಸ್ತ್ರಜ್ಞರ ಚಿಂತನೆಗಳು ಅರೇಬಿಕ್ ಭಾಷೆಗೆ ಅನುವಾದವಾದವು, ಆನಂತರ ಲ್ಯಾಟಿನ್ ಭಾಷೆಗೂ ಅನುವಾದವಾಗಿ ಅವು ಆಯಾಯಾ ದಾರ್ಶನಿಕ, ಧರ್ಮಶಾಸ್ತ್ರೀಯ ಮತ್ತು ನ್ಯಾಯಶಾಸ್ತ್ರೀಯ ಪರಂಪರೆಗಳಲ್ಲಿ ಚರ್ಚೆಗೆ ಒಳಗಾದವು, ಜೀರ್ಣಿಸಿಕೊಳ್ಳಲ್ಪಟ್ಟವು ಮತ್ತು ವಿಶದೀಕರಿಸಲ್ಪಟ್ಟವು. ಬಡ್ಡಿಯ ನಿಷೇಧವನ್ನು ನಾವು ಬೈಬಲ್ ಗ್ರಂಥದ ಹಳೆಯ ಒಡಂಬಡಿಕೆಯಲ್ಲಿಯೂ ಮತ್ತು ಕುರಾನ್ ಗ್ರಂಥದಲ್ಲಿಯೂ ಕಾಣಬಹುದು. ಹಿಪ್ಪೋದ ಆಗಸ್ಟೀನ್ ನ 'ಕನ್ಫೆಶನ್' ಗ್ರಂಥದಲ್ಲಿ ಪ್ಲೇಟೋ ಮತ್ತು ಅರಿಸ್ಟಾಟಲ್ ಅವರ ಚಿಂತನೆಗಳನ್ನು ಕ್ರಿಶ್ಚಿಯನ್ ದೃಷ್ಟಿಕೋನಕ್ಕೆ ಅಳವಡಿಸಿಕೊಂಡಿರುವುದನ್ನು ಕಾಣಬಹುದು ಮತ್ತು ಅದು ಪಾಶ್ಚಿಮಾತ್ಯ ಚಿಂತನೆಯ ಮೇಲೆ ಗಾಢವಾದ ಮುದ್ರೆಯನ್ನು ಒತ್ತಿತು. ಗ್ರೀಕರ ಚಿಂತನೆಗಳು ಇಸ್ಲಾಂನ ಆರ್ಥಿಕ ಚಿಂತನೆಯೊಳಗೆ ಪ್ರವೇಶಿಸಿದವು ಮತ್ತು ವಿಶೇಷವಾಗಿ ಇಸ್ಲಾಮಿನ ಬ್ಯಾಂಕ್ ವ್ಯವಸ್ಥೆಯ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಾ ಹೋದವು.

ನಾನೀಗ ಯುರೋಪಿನ ಮಧ್ಯಯುಗದಲ್ಲಿ ಚರ್ಚ್‌ನ ಧರ್ಮಾಧಿಕಾರಿಗಳ ಬೋಧನೆಗಳು ಏನಿದ್ದವು ಎಂಬುದರ ಕಡೆಗೆ ಗಮನ ಹರಿಸಲಿದ್ದೇನೆ.

ಸ್ಕೊಲಾಸ್ಟಿಸಮ್( ಯುರೋಪಿನ ಮಧ್ಯಯುಗದ ಧರ್ಮಶಾಸ್ತ್ರ)

ಕ್ರಿಶ್ಚಿಯನ್ ಧರ್ಮ ಬೋಧಕರು ಪ್ರಾಚೀನ ಕಾಲದವರ ಅರ್ಥಶಾಸ್ತ್ರದ ದೃಷ್ಟಿಕೋನಗಳನ್ನು ವಿಶೇಷವಾಗಿ ಅರಿಸ್ಟಾಟಲ್‌ನ ಅಭಿಪ್ರಾಯಗಳನ್ನು ಅಭಿವೃದ್ಧಿಪಡಿಸುವುದನ್ನು ಮುಂದುವರೆಸಿದರು ಮತ್ತು ಬೈಬಲ್ ಹಾಗೂ ರೋಮನ್ ಕಾನೂನಿನ ಆಲೋಚನೆಗಳನ್ನು ಸಹ ಜೊತೆಗೆ ಸೇರಿಸಿಕೊಂಡರು. ಈ ಧರ್ಮಶಾಸ್ತ್ರದ ಅತ್ಯಂತ ಮುಖ್ಯ ಚಿಂತಕರೆಂದರೆ ಥಾಮಸ್ ಅಕ್ವಿನಾಸ್ (1225-1274). ಅವರು 'ಸುಮ್ಮ ಥಿಯೋಲಜಿಯೇ' ಎಂಬ ಮೂರು ಸಂಪುಟಗಳ ಪುಸ್ತಕವನ್ನು ಬರೆದರು; ಸಾಲಮಂಕಾದಲ್ಲಿ ಇದಕ್ಕಾಗಿ ಶಾಲೆಯನ್ನು ನಡೆಸುತ್ತಿದ್ದ ಪ್ರ್ಯಾನ್ಸಿಸ್ಕೋ ಡಿ ವಿಟೋರಿಯಾ (1483-1546) ಅವರು ಇನ್ನೊಬ್ಬ ಗಮನಾರ್ಹ ಧರ್ಮಶಾಸ್ತ್ರಜ್ಞ. ಪ್ಲೇಟೋ ಮತ್ತು ಅರಿಸ್ಟಾಟಲ್ ಅವರಂತೆ ಅಕ್ವಿನಾಸ್ ಅವರ ದೃಷ್ಟಿಕೋನವು ಪ್ರಧಾನವಾಗಿ ನಿಯಮ ಬೋಧಕ ರೀತಿಯದ್ದು ಮತ್ತು ಅವರು ಅಂತಹ ವಿಷಯಗಳ ಬಗ್ಗೆಯೇ ಗಮನ ಹರಿಸಿದರು: ಉದಾಹರಣೆಗೆ- "ನ್ಯಾಯಯುತ ಬೆಲೆ", "ಬಡ್ಡಿ ಮತ್ತು ಲೇವಾದೇವಿ", "ನ್ಯಾಯಯುತ ತೆರಿಗೆ ಪದ್ಧತಿ" ("ಸೀಸರ್ ನಿಗೆ ಸೇರಿದ ವಸ್ತುಗಳನ್ನು ಸೀಸರನಿಗೇ ಹಿಂದಿರುಗಿಸಿ").

ಆದರೂ ಸಹ ತಮಗಿಂತ ಮುಂಚೆ ಬಂದಿದ್ದ ಗ್ರೀಕ್ ಚಿಂತಕರಿಗಿಂತ ಭಿನ್ನವಾಗಿ ಈ ಧರ್ಮಶಾಸ್ತ್ರಜ್ಞರು ಈ ಜಗತ್ತಿನಲ್ಲಿ ಉತ್ತಮ ಬದುಕನ್ನು ಗಳಿಸಿಕೊಳ್ಳುವುದರ ಬಗ್ಗೆ ಗಮನಹರಿಸದೆ ಮುಂದಿನ ಜನ್ಮದಲ್ಲಿ ಹೇಗೆ ನರಕದಿಂದ ತಪ್ಪಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಗಮನಹರಿಸಿದರು. ಹಳೆಯ ಒಡಂಬಡಿಕೆಯಲ್ಲಿ ಹೇಳಿರುವಂತೆ ಸ್ವರ್ಗದಿಂದ ಹೊರದೂಡಲ್ಪಟ್ಟು ತನ್ನ ಪಾಪಕ್ಕಾಗಿ ಶಿಕ್ಷೆಯನ್ನು ಅನುಭವಿಸುತ್ತಾ ಸಂಕಷ್ಟಗಳು ಹಾಗೂ ದುಃಖ ತುಂಬಿದ ಬದುಕನ್ನು ಹೇಗೋ ನಡೆಸುತ್ತಿರುವ ಮನುಷ್ಯನು ಅವರಿಗೆ ವಿಷಯವಾಗಿದ್ದನು. ಪರಿಶ್ರಮದಾಯಕ ಕೆಲಸವು ಅವನು ಬದುಕುಳಿಯುವುದನ್ನು ಹಾಗೂ ಗಾಢವಾದ ವಿಶ್ವಾಸವನ್ನು ಪ್ರದರ್ಶಿಸಿದ್ದಕ್ಕಾಗಿ ಪ್ರತಿಫಲವಾಗಿ ಆಗಾಗ ಪವಾಡಗಳಿಂದ ತುಂಬಿದ ಬದುಕನ್ನು ಖಾತ್ರಿಪಡಿಸುತ್ತದೆ. ಧರ್ಮಶಾಸ್ತ್ರೀಯ ಆರ್ಥಿಕ ಚಿಂತನೆಯ ಪ್ರಕಾರ ಜನತೆಯ ಬಹುದೊಡ್ಡ ಭಾಗಗಳು ಅನುಭವಿಸುವ ಬೌದ್ಧಿಕ ಸಂಕಷ್ಟಗಳಿಗೆ ಉತ್ತರವೆಂದರೆ ಉನ್ನತ ಉತ್ಪಾದನೆ ಅಲ್ಲ, ಆರ್ಥಿಕ ಅಭಿವೃದ್ಧಿಯಲ್ಲ ಬದಲಿಗೆ ಆತ್ಮ ಸಂಯಮ ಮತ್ತು ಅವಶ್ಯಕತೆಗಳನ್ನು ಅದುಮಿಡುವುದು.

ಧರ್ಮಶಾಸ್ತ್ರದ ಹೃದಯ ಭಾಗವೆಂದರೆ ಲೇವಾದೇವಿಯನ್ನು ಕುರಿತಾದ ಸಿದ್ಧಾಂತ. ಅದರಲ್ಲಿನ ಮುಖ್ಯವಾದ ಪ್ರತಿಪಾದನೆ ಎಂದರೆ, ಹಣವು ಬರಡಾದದ್ದು, ಅದು ಇನ್ನೊಂದು "ಕೂಸಿಗೆ ಜನ್ಮ ನೀಡಲಾರದು". ಇನ್ನೊಂದು ವಾದವೆಂದರೆ ದೇವರು ಎಲ್ಲ ಮನುಷ್ಯರಿಗೂ ಸಮಾನವಾಗಿ ಸಮಯವನ್ನು ನೀಡಿರುತ್ತಾನೆ, ಆದ್ದರಿಂದ ಸಾಲವನ್ನು ತೆಗೆದುಕೊಳ್ಳುವುದು ಮತ್ತು ಮರುಪಾವತಿ ಮಾಡುವುದು ಈ ಪ್ರಕ್ರಿಯೆಗಳ ನಡುವೆ ಒಂದಿಷ್ಟು ಸಮಯವು ಉರುಳಿಹೋಗಿದೆ ಎಂಬ ಕಾರಣಕ್ಕಾಗಿ ಬಡ್ಡಿ ವಸೂಲಿ ಮಾಡುವುದನ್ನು ಸಮರ್ಥಿಸಲಾಗದು. ಮೂರನೆಯ ವಾದವು ಮಧ್ಯಯುಗದ ಆರ್ಥಿಕತೆಯ ಒಂದು ಲಕ್ಷಣದ ಮೇಲೆ ಆಧಾರಿತವಾಗಿತ್ತು; ಅದೆಂದರೆ ಸತತವಾದ ಆರ್ಥಿಕ ಬೆಳವಣಿಗೆ ಇಲ್ಲದಿರುವುದು. ಇದರಿಂದಾಗಿ ಬಹುತೇಕ ಸಾಲಗಳನ್ನು ನೀಡಿದ್ದದ್ದು ಬಳಕೆದಾರರಿಗೇ ಹೊರತು ಉತ್ಪಾದಕರಿಗೆ ಅಲ್ಲ. ಧರ್ಮಶಾಸ್ತ್ರಜ್ಞರು, ಕ್ರಿಶ್ಚಿಯನ್ ಒಬ್ಬನ ಕರ್ತವ್ಯವು ಅವಶ್ಯಕತೆಗಳಿಗೆ ಬಲಿಯಾದ ಮುಗ್ಧನೊಬ್ಬನಿಗೆ ನೆರವು ನೀಡುವುದೇ ಹೊರತು ಅವನನ್ನು ಶೋಷಿಸುವುದಿಲ್ಲ ಅಥವಾ ಬಡ್ಡಿಯನ್ನು ಹೇರುವುದರ

ಮೂಲಕ ಅವನ ಪರಿಸ್ಥಿತಿಯನ್ನು ಇನ್ನಷ್ಟು ದುರ್ಭರಗೊಳಿಸುವುದಲ್ಲ ಎಂದು ವಾದಿಸುತ್ತಿದ್ದರು. 'ಫೀನಸ್ ಪೆಕ್ಯೂನಿಯೆ ಫ್ಯೂನಸ್ ಎಸ್ಟ್ ಅನಿಮೇ' -- ಹಣದ ಮೂಲಕ ಪಡೆಯುವ ಬಡ್ಡಿಯು ಆತ್ಮವನ್ನು ಸಾವಿಗೆ ದೂಡುತ್ತದೆ. ಒಂದು ಉತ್ತಮ ಸಮಾಜವು ಆಗ್ರಹಿಸುವುದೇನೆಂದರೆ, ಅದರ ಸದಸ್ಯರು ನೀತಿವಂತರಾಗಿ ಬದುಕಬೇಕು ಎಂದು.

ಅದೇನೇ ಇರಲಿ 12 ಮತ್ತು 16ನೆಯ ಶತಮಾನದಲ್ಲಿ ಯುರೋಪಿನಲ್ಲಿ ಆದಂತೆ ವ್ಯಾಪಾರ ಮತ್ತು ಕೈಗಾರಿಕೆಗಳು ವೇಗವಾಗಿ ಬೆಳೆದರೆ ಮತ್ತು ಕೈಗಾರಿಕಾ ಕ್ರಾಂತಿಯ ನಂತರ ಆದಂತೆ ಆರ್ಥಿಕತೆಯು ಸತತವಾದ ಆರ್ಥಿಕ ಬೆಳವಣಿಗೆಯ ಹಾದಿಯಲ್ಲಿ ಹೊರಟರೆ ಮತ್ತು ಹೂಡಿಕೆಗಳಿಗೆ ಹಣಕಾಸನ್ನು ಒದಗಿಸಲು ನಗದಿನ ಅವಶ್ಯಕತೆ ಉಂಟಾದರೆ ಆಗ ಏನಾಗುತ್ತದೆ? ಬಡ್ಡಿ ಎಂದರೆ ಅಸಹ್ಯಿಸಿಕೊಳ್ಳುತ್ತಿದ್ದ ಪುರಾತನ ಮತ್ತು ಮಧ್ಯಯುಗದ ಆರ್ಥಿಕತೆಗಳು ಹೆಚ್ಚು ಕಡಿಮೆ ಸ್ಥಗಿತಗೊಂಡಿದ್ದವು ಮತ್ತು ವರ್ಷದಿಂದ ವರ್ಷಕ್ಕೆ ಯಾವುದೇ ಮುಖ್ಯ ಬದಲಾವಣೆ ಇಲ್ಲದೆ ತಮ್ಮನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದವು (ಇದಕ್ಕೆ ಅಪವಾದವೆಂದರೆ ಬೆಳೆ ಅತ್ಯುತ್ತಮವಾದ ಅಥವಾ ತೀರಾ ಹಾಳಾಗಿ ಹೋದ ಸಂದರ್ಭಗಳು, ಯುದ್ಧಗಳು ಮತ್ತು ಸಾಂಕ್ರಾಮಿಕ ಮಹಾಮಾರಿಗಳು). ಆರ್ಥಿಕತೆಯು ಸತತವಾದ, ಸ್ಥಿರವಾದ, ಆರ್ಥಿಕ ಬೆಳವಣಿಗೆಯ ಹಾದಿಯಲ್ಲಿ ಹೊರಟಾಗ ತತ್ಫಲವಾಗಿ ಆರ್ಥಿಕ ವಿಶ್ಲೇಷಣೆಯು ಸಹ ಬದಲಾಗಬೇಕಾಯಿತು. ಅರಿಸ್ಟಾಟಲ್‌ನ ಮತ್ತು ಧರ್ಮಶಾಸ್ತ್ರಜ್ಞರ ಅಭಿಪ್ರಾಯಗಳು ಕ್ರಮೇಣ ಹಿನ್ನೆಲೆಗೆ ಸರಿದವು (ಅದು ಪೂರ್ತಿಯಾಗಿ ಕಾಣೆಯಾಗದೆ ಉಳಿದಿತ್ತು ಎಂಬುದು ನಿಜ. ಧರ್ಮಶಾಸ್ತ್ರಜ್ಞರ ಕೆಲವೊಂದು ಅಭಿಪ್ರಾಯಗಳು ಆಸ್ಟ್ರಿಯಾದ ಅರ್ಥಶಾಸ್ತ್ರದಲ್ಲಿ ಪುನಹ ಕಾಣಿಸಿಕೊಳ್ಳುತ್ತವೆ. ಇದರ ಉದಾಹರಣೆಯನ್ನು ಅಧ್ಯಾಯ 4 ರಲ್ಲಿ ಚರ್ಚಿಸಲಾಗಿದೆ) ಮತ್ತು 13 ಮತ್ತು 16ನೇ ಶತಮಾನದಲ್ಲಿ ಮತ್ತೊಮ್ಮೆ ಅರಳಿಕೊಂಡ ಧರ್ಮಶಾಸ್ತ್ರವಾದವು, 16ನೆಯ ಶತಮಾನದಲ್ಲಿ ಸಾಲಮಂಕ ಶಾಲೆಯ ಅವನತಿಯ ನಂತರ ಅಂತ್ಯಗೊಂಡಿತು. ಸಾಲಮಂಕ ಶಾಲೆಯಲ್ಲಿ ಅಷ್ಟು ಹೊತ್ತಿಗಾಗಲೇ ಧನಾತ್ಮಕ ಅರ್ಥಶಾಸ್ತ್ರದ ಸ್ಪಷ್ಟ ಕುರುಹುಗಳು ಕಾಣಿಸಿಕೊಂಡಿದ್ದವು ಮತ್ತು ಅವು ನಮ್ಮ ಅಧ್ಯಾಯ ಎರಡರ ವಿಷಯವಾದ ಅಭಿಜಾತ ಅರ್ಥಶಾಸ್ತ್ರದಲ್ಲಿ ರಂಗದ ಕೇಂದ್ರ ಭಾಗವನ್ನು ಆಕ್ರಮಿಸಿಕೊಂಡವು. ಆದರೆ ನಾವು ಅಭಿಜಾತ ಅರ್ಥಶಾಸ್ತ್ರಜ್ಞರ ಕುರಿತು ಚರ್ಚಿಸುವ ಮೊದಲು, ಆಡಂ ಸ್ಮಿತ್ ಅವರು (1723-1790) ವ್ಯಾಪಾರೋದ್ಯಮವಾದ (ಮರ್ಕೆಂಟಲಿಸಂ) ಎಂದು ಯಾವುದನ್ನು ಕರೆದರೋ ಮತ್ತು ಜರ್ಮನ್ ಭಾಷೆಯ ಜಗತ್ತು ಯಾವುದನ್ನು 'ಕ್ಯಾಮೆರಲಿಸಂ' ಎಂದು ಕರೆಯಿತೋ ಅದರತ್ತ ಕಣ್ಣು ಹಾಯಿಸಬೇಕಾಗುತ್ತದೆ. ಈ ಶೀರ್ಷಿಕೆಗಳ ಅಡಿಯಲ್ಲಿ ಜೋಡಿಸಲಾದ ಕಲ್ಪನೆಗಳು ಒಂದು ಸುಸಂಗತ ಚಿಂತನಾ ಧಾರೆಯನ್ನು ರಚಿಸುವುದಿಲ್ಲ. ಆದರೆ ಅವು ಅಮುಖ್ಯವಾಗಿದ್ದವು ಎಂಬುದು ಇದರ ಅರ್ಥವಲ್ಲ. ವಾಸ್ತವವಾಗಿ ಅವು ಆರ್ಥಿಕ ನೀತಿಗಳ ಮೇಲೆ ಅಂದು ಮತ್ತು ಇಂದೂ ಸಹ ಅಪಾರ ಪ್ರಭಾವವನ್ನು ಬೀರಿವೆ.

## ವ್ಯಾಪಾರೋದ್ಯಮವಾದ ಮತ್ತು ಕ್ಯಾಮೆರಲಿಸಂ

ವ್ಯಾಪಾರೋದ್ಯಮವಾದದ ಉತ್ತುಂಗವು ಹದಿನಾರನೆಯ ಶತಮಾನದಿಂದ ಹಿಡಿದು 18ನೇ ಶತಮಾನದವರೆಗೂ ಇತ್ತು ಮತ್ತು ಅದರ ಜೊತೆಯಲ್ಲೇ ಯುರೋಪಿನಲ್ಲಿ ರಾಷ್ಟ್ರ-ಪ್ರಭುತ್ವಗಳು ಹುಟ್ಟಿ ಬೆಳೆದವು, ಹೊಸ ಜಗತ್ತುಗಳ ಆವಿಷ್ಕಾರವಾಯಿತು ಮತ್ತು ದೂರ ಪ್ರದೇಶದ ವ್ಯಾಪಾರವು ವಿಸ್ತರಿಸಿಕೊಂಡಿತು. ಅದೇನೇ ಇರಲಿ ವ್ಯಾಪಾರೋದ್ಯಮವಾದಿ ಚಿಂತನೆಗಳು ಮತ್ತು ಆರ್ಥಿಕ ನೀತಿಗಳು ವಿಶಾಲವಾಗಿ ಪ್ರಚಲಿತವಾಗಿವೆ. ಅಭಿಜಾತ ಅರ್ಥಶಾಸ್ತ್ರಜ್ಞರಾದ ಆಡಂ ಸ್ಮಿತ್ ಅವರು ತಮ್ಮ 'ಆನ್ ಇನ್ಕ್ವಯರಿ ಇನ್ ಟು ದಿ ನೇಚರ್ ಅಂಡ್ ಕಾಸಸ್ ಆಫ್ ದಿ ವೆಲ್ತ್ ಆಫ್ ನೇಶನ್ಸ್' ಎಂಬ ಗ್ರಂಥದಲ್ಲಿ ಮಾಡಿದಂತಹ ತೀವ್ರವಾದ ಟೀಕೆಯ ಕಾರಣದಿಂದಾಗಿ ವ್ಯಾಪಾರೋದ್ಯಮವಾದವು ಬಹುಕಾಲ ಪ್ರಸಿದ್ಧಿಯನ್ನು ಪಡೆದುಕೊಂಡಿತು. ವಿಭಿನ್ನ ಚಿಂತನೆಗಳ ಮಿಶ್ರಣವನ್ನು

ವ್ಯಾಪಾರೋದ್ಯಮವಾದ ಎಂಬ ಹೆಸರಿನಿಂದ ಕರೆದದ್ದು ಸ್ಮಿತ್ ಅವರೇ. ಅದು ನಿಜವಾಗಿಯೂ ಒಂದು ಏಕೀಕೃತ ಚಿಂತನಾ ಪದ್ಧತಿಯಲ್ಲದಿದ್ದರೂ ಆ ಹೆಸರೇ ಅದಕ್ಕೆ ಉಳಿದುಬಿಟ್ಟಿತು.

ಲುಡ್ವಿಗ್ ವಿಟ್ಜೆನ್ ಸ್ಟೈನ್ ಅವರು (1889-1951), ದಾರ್ಶನಿಕ ಪದ್ಧತಿಗಳನ್ನು ನಿರೂಪಿಸುವ ಪ್ರಯತ್ನವು ಅನೇಕ ಬಾರಿ ಮೋಡಗಳನ್ನು ಅವುಗಳ ಆಕಾರಕ್ಕೆ ಅನುಗುಣವಾಗಿ ವಿಭಾಗೀಕರಿಸುವ ಪ್ರಯತ್ನದಂತೆಯೇ ಎಂದು ಹೇಳಿದ್ದಾರೆ; ವ್ಯಾಪಾರೋದ್ಯಮವಾದ ಕುರಿತಾದ ಸ್ಮಿತ್ ಅವರ ಪರಿಕಲ್ಪನೆಯ ಬಗ್ಗೆ ಸಹ ಇದೇ ಮಾತನ್ನು ಹೇಳಬಹುದು. ವ್ಯಾಪಾರೋದ್ಯಮವಾದಿ ಆರ್ಥಿಕ ಚಿಂತನೆಯಲ್ಲಿ ಸುಸಂಬದ್ಧತೆ ಇರಲಿಲ್ಲ, ವ್ಯವಸ್ಥಿತವಾದ ವಿಭಾಗೀಕರಣವಿರಲಿಲ್ಲ ಮತ್ತು ಎಲ್ಲಾ ಆರ್ಥಿಕ ಕ್ಷೇತ್ರಗಳ ಕುರಿತು ಸಮಗ್ರವಾದ ಪರಿಶೀಲನೆ ಇರಲಿಲ್ಲ ಎಂಬುದು ನಿಜ. ಅದರ ಪ್ರತಿಪಾದಕರು ನಿರುದ್ವಿಗ್ನ ವಿದ್ವಾಂಸರಾಗಿರಲಿಲ್ಲ, ಬದಲಿಗೆ ಸರ್ಕಾರದ ಖಜಾನೆಯನ್ನು ತುಂಬಿಸಲು ಕಾತರರಾಗಿದ್ದ ಲಾಭೋದ್ದೇಶ ಹೊಂದಿದ ವ್ಯಾಪಾರಸ್ಥರು ಮತ್ತು ಸರ್ಕಾರಿ ಉದ್ಯೋಗಿಗಳು ಆಗಿದ್ದರು. ಹೊಸ ಪ್ರದೇಶಗಳನ್ನು ಗೆಲ್ಲುವುದು, ದೇಶದ ವಾಣಿಜ್ಯವನ್ನು ಸಂರಕ್ಷಿಸುವುದು, ವಸಾಹತುಗಳನ್ನು ರಚಿಸುವುದು, ಜನತೆಯನ್ನು ನಿಯಂತ್ರಿಸುವುದು ಮತ್ತು ಮುಖ್ಯವಾಗಿ ಆಮದಿಗಿಂತ ಹೆಚ್ಚಾಗಿ ಸರಕುಗಳನ್ನು ರಫ್ತು ಮಾಡುವುದು ಅವರ ಮುಖ್ಯ ಕಾಳಜಿಯಾಗಿತ್ತು.

ವ್ಯಾಪಾರದಲ್ಲಿ ಹೆಚ್ಚುವರಿಯನ್ನು (ಸರ್ಪ್ಲಸ್) ಸಾಧಿಸುವ ಕಡೆ ವ್ಯಾಪಾರೋದ್ಯಮವಾದಿಗಳಿಗೆ ಇದ್ದ ಗಮನಕ್ಕೂ ದೇಶದ ಸಂಪತ್ತಿನ ಕುರಿತು ಅವರಿಗಿದ್ದ ಪರಿಕಲ್ಪನೆಗೂ ನೇರವಾದ ಸಂಬಂಧವಿದೆ. ಇಂಗ್ಲೆಂಡಿನ ಚಿಂತಕರಾದ ಥಾಮಸ್ ಮುನ್ (1571-1641) ಅವರು, 'ಇಂಗ್ಲೆಂಡ್ಸ್ ಟ್ರೆಷರ್ ಬೈ ಫಾರಿನ್ ಟ್ರೇಡ್' (1630 ಸುಮಾರಿನಲ್ಲಿ ಬರೆದದ್ದು) ಎಂಬ ತಮ್ಮ ಪುಸ್ತಕದಲ್ಲಿ ಬರೆದಿರುವಂತೆ, "ನಾವು ಪ್ರತಿ ವರ್ಷವೂ ಅಪರಿಚಿತರಿಂದ ಕೊಳ್ಳುವ ವಸ್ತುಗಳ ಮೌಲ್ಯಕ್ಕಿಂತ ಹೆಚ್ಚಿನದನ್ನು ಮಾರುವುದರ ಮೂಲಕ ಇಂಗ್ಲೆಂಡಿನ ಸಂಪತ್ತು ವೃದ್ಧಿಯಾಗಿದೆ". ಅವರು ಮತ್ತು ಇತರ ವ್ಯಾಪಾರೋದ್ಯಮವಾದಿಗಳು, ಇದನ್ನು ಸಾಧಿಸಲು ರಫ್ತಿಗೆ ಉತ್ತೇಜನ ನೀಡಬೇಕು (ರಫ್ತು ಬೆಂಬಲ) ಮತ್ತು ಆಮದಿಗೆ ನಿರ್ಬಂಧಗಳು ಇರಬೇಕು (ವ್ಯಾಪಾರದಲ್ಲಿ ಸುಂಕ ಮತ್ತು ಇತರ ಅಡೆತಡೆಗಳು) ಎಂದು ವಾದಿಸಿದರು.

ನಂತರ ಬಂದ ವಿಮರ್ಶಕರು ಈ ಆರ್ಥಿಕ ನೀತಿಯನ್ನು ಅವೈಚಾರಿಕ ಎಂದು ಕರೆದಿದ್ದರು. ಆದರೂ ಅದು ನಿಜಕ್ಕೂ ಮೊದಲ ನೋಟದಲ್ಲಿ ಕಾಣುವ ಮಟ್ಟಿಗೆ ಹಾಗಿರಲಿಲ್ಲ. ಅಮೂಲ್ಯ ಲೋಹಗಳು ನಾಣ್ಯಗಳ ರೂಪದಲ್ಲಿ ಹಣವಾಗಿ ಚಲಾವಣೆಯಲ್ಲಿದ್ದಾಗ, ದೇಶವೊಂದು ಬೆಳೆಯುತ್ತಿದ್ದ ಮಾರುಕಟ್ಟೆಗಳಿಗೆ ಮುಖಾಮುಖಿಯಾಗಿದ್ದಾಗ, ಹೆಚ್ಚು ಹೆಚ್ಚಾಗಿ 'ಸರಕುಗಳ ಸರಕು' ಎಂದು ಕರೆಯಲ್ಪಟ್ಟಿದ್ದ ಚಿನ್ನದ ಅವಶ್ಯಕತೆಯಿತ್ತು. ದೇಶವೊಂದು ತಾನಾಗಿಯೇ ಅಮೂಲ್ಯ ಲೋಹಗಳನ್ನು ಉತ್ಪಾದಿಸುವ ಸ್ಥಿತಿಯಲ್ಲಿ ಇಲ್ಲದಿದ್ದಾಗ (ಉದಾಹರಣೆಗೆ ಇಂಗ್ಲೆಂಡ್, ಅಲ್ಲಿ ಈ ಲೋಹಗಳು ಗಮನಾರ್ಹ ಪ್ರಮಾಣದಲ್ಲಿ ಸಿಗುತ್ತಿರಲಿಲ್ಲ), ಧನಾತ್ಮಕ ವ್ಯಾಪಾರ ಸಮತೋಲನವು ಅವಶ್ಯಕವಾಗಿದ್ದ ಚಿನ್ನವನ್ನು ತರುತ್ತಿತ್ತು. ಇದಕ್ಕಾಗಿ ಇಂಗ್ಲೆಂಡಿನ ರಾಜ ಮನೆತನವು ಬೆಂಬಲಿಸಿದ ಇನ್ನೊಂದು ಮಾರ್ಗವೆಂದರೆ ಕಡಲ್ಗಳ್ಳತನ: ಕೇಂದ್ರ ಮತ್ತು ದಕ್ಷಿಣ ಅಮೆರಿಕದಿಂದ ಚಿನ್ನ ಮತ್ತು ಬೆಳ್ಳಿಯನ್ನು ತರುತ್ತಿದ್ದ ಸ್ಪೇನ್ ದೇಶದ ಹಡಗುಗಳನ್ನು ವಶಪಡಿಸಿಕೊಳ್ಳುವುದು. ಜಾನ್ ಹಾಕಿನ್ಸ್ ಮತ್ತು ಫ್ರಾನ್ಸಿಸ್ ಡ್ರೇಕ್ ರಂತಹ ಕಡಲ್ಗಳ್ಳರು ಇಂಗ್ಲಿಷ್ ರಾಜ ಪ್ರಭುತ್ವದ ಸೇವೆಯಲ್ಲಿ ಹಣವನ್ನು ದರೋಡೆ ಮಾಡಿಕೊಂಡು ಬಂದದ್ದಕ್ಕಾಗಿ ಅವರಿಗೆ ಅತ್ಯುನ್ನತ ಸನ್ಮಾನಗಳನ್ನು ಮಾಡಲಾಯಿತು. ವಿಸ್ತರಣಾವಾದಿ ರಾಷ್ಟ್ರ ಪ್ರಭುತ್ವಗಳ ಮಧ್ಯದಲ್ಲಿ ಸಂಘರ್ಷವು ಹೆಚ್ಚಾದಂತೆ ಮುಂದಿನ ಯುದ್ಧಗಳ ಸಿದ್ಧತೆಗಾಗಿ ಆ ಸಂಪತ್ತು ಮುಖ್ಯವಾಯಿತು. ಆಗಲೂ ಸಹ ಬೃಹತ್ತಾದ ಶಾಶ್ವತ ಸೈನ್ಯಗಳು ಇರಲಿಲ್ಲ. ಆದ್ದರಿಂದ ಅದನ್ನು ಸಂಘಟಿಸಲು ಒಂದು ಸಂಪದ್ಭರಿತವಾದ ಪ್ರಭುತ್ವದ ಖಜಾನೆಯು ಅತ್ಯುತ್ತಮ ಖಾತ್ರಿಯಾಗಿತ್ತು; ಆಗಿನ ಕಾಲದ ವೀಕ್ಷಕನೊಬ್ಬನು ಗಾಢ

ಒಳನೋಟದಿಂದ ನುಡಿದಂತೆ "ಹಣವೇ ಯುದ್ಧದ ಜೀವನಾಡಿ". ಅಂತಿಮವಾಗಿ ರಫ್ತಿನ ಉತ್ತೇಜನವು ದೇಶದೊಳಗಿನ ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿಯನ್ನು ಪ್ರಚೋದಿಸಿತು ಮತ್ತು ಆಮದಿನ ಮೇಲಿನ ನಿರ್ಬಂಧಗಳು ಬೇರೆ ದೇಶಗಳಿಗೆ ಈ ಅನುಕೂಲತೆ ಸಿಗದಂತೆ ಮಾಡಿದವು: ರಾಷ್ಟ್ರದೊಳಗೆ ಸರಕುಗಳನ್ನು ಉತ್ಪಾದಿಸಿದಂತೆ ಅವು ದೇಶದೊಳಗಿನ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿದವು ಮತ್ತು ಹೊರದೇಶಗಳ ಸರಕುಗಳಿಗೆ ಬೇಡಿಕೆ ಇರದಿದ್ದುದರಿಂದ ಅಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿರಲಿಲ್ಲ. ಜೋನ್ ರಾಬಿನ್ ಸನ್ (1903 –1983) ಅವರು ನಂತರದ ಕಾಲದಲ್ಲಿ ಇದನ್ನು "ನನ್ನ ನೆರೆಯವನು ಭಿಕ್ಷುಕನಾಗಿರಲಿ ಎಂಬ ನೀತಿ" ಎಂದು ಕರೆದರು: ಒಂದು ದೇಶವು ತನ್ನ ಹೆಚ್ಚುವರಿ ಸರಕುಗಳನ್ನು ರಫ್ತು ಮಾಡುವಾಗಲೇ ನಿರುದ್ಯೋಗವನ್ನು ಸಹ ರಫ್ತು ಮಾಡಿರುತ್ತದೆ. (ನಮ್ಮ ಕಾಲದಲ್ಲಿಯೂ ಸಹ ಇಂತಹ ನೀತಿಯು ಚಾಲ್ತಿಯಲ್ಲಿದೆ ಎಂಬುದನ್ನು ನಾವು ಗಮನಿಸಬೇಕು; ಉದಾಹರಣೆಗೆ ಎರಡನೇ ಮಹಾಯುದ್ಧದ ನಂತರ ಜರ್ಮನಿ ಮತ್ತು ಜಪಾನ್ ಹೆಚ್ಚುವರಿ ರಫ್ತಿನ ಅನುಕೂಲತೆಯನ್ನು ಅನುಭವಿಸಿದವು ಮತ್ತು ಇಂದಿನ ಕಾಲದಲ್ಲಿ ಚೀನಾ ತನ್ನ ಆಂತರಿಕ ನಾಣ್ಯವನ್ನು -ಕರೆನ್ಸಿ- ಅಪಮೌಲ್ಯಗೊಳಿಸಿ ಇದೇ ಅನುಕೂಲತೆಯನ್ನು ಅನುಭವಿಸುತ್ತಿದೆ).

ಎಲ್ಲಾ ವ್ಯಾಪಾರೋದ್ಯಮವಾದಿ ಲೇಖಕರು ಸಹ ರಾಜಪ್ರಭುತ್ವದ ಖಜಾನೆಯಲ್ಲಿ ಎಷ್ಟು ಅಮೂಲ್ಯ ಲೋಹಗಳ ಸಂಗ್ರಹವಿದೆ ಎಂಬುದರ ಮೂಲಕ ರಾಷ್ಟ್ರೀಯ ಸಂಪತ್ತನ್ನು ಅಳತೆ ಮಾಡಲಿಲ್ಲ. ಕೆಲವರಿಗಾದರೂ ಹಣವನ್ನು ಪರಿಚಲನೆಯಿಂದ ಹಿಂತೆಗೆದುಕೊಂಡು ಕಳ್ಳದಾಸ್ತಾನು ಮಾಡಿದಾಗ ಅದು ಆರ್ಥಿಕ ಚಟುವಟಿಕೆಯನ್ನು ಉಸಿರುಗಟ್ಟಿಸುತ್ತದೆ ಎಂಬುದು ಸ್ಪಷ್ಟವಾಗಿತ್ತು- ಮತ್ತು ಕೆಲವರು (ವ್ಯಾಪಾರೋದ್ಯಮವಾದಿ ಚಿಂತನಾಧಾರೆಗೆ ಸೇರಿದವರು ಮತ್ತು ಅದರ ಹೊರಗಿದ್ದವರು ಸಹ) ಹೆಚ್ಚುತ್ತಿದ್ದ ಹಣದ ಸರಬರಾಜಿನ ಪರಿಚಲನೆಯು ಶೀಘ್ರದಲ್ಲೇ ಅಥವಾ ಸ್ವಲ್ಪ ಸಮಯದ ನಂತರ ಹಣದ ಬೆಲೆಗಳ ಮೇಲೆ ಪ್ರಭಾವವನ್ನು ಬೀರುತ್ತದೆ ಎಂಬುದನ್ನು ಗುರುತಿಸಿದ್ದರು. ಜಾನ್ ಲಾಕ್ (1632- 1704) ಮತ್ತು ಚಾರ್ಲ್ಸ್ ಡಾವೆನೆಂಟ್ (1656-1714) ತೋರಿಸಿಕೊಟ್ಟಂತೆ ವ್ಯಾಪಾರದ ಹೆಚ್ಚುವರಿಗಳು ಮತ್ತು ಅದರಿಂದ ಉಂಟಾಗುವ ಅಮೂಲ್ಯ ಲೋಹಗಳ ಒಳಹರಿವು ಅಂತಿಮವಾಗಿ ದೇಶದೊಳಗೆ ಬೆಲೆ ಏರಿಕೆಗೆ ಕಾರಣವಾಯಿತು. ಈ ರೀತಿಯಲ್ಲಿ ಹಣದ ಪರಿಮಾಣಾತ್ಮಕ ಸಿದ್ಧಾಂತ ಎಂಬುದರ ಆರಂಭಿಕ ಆವೃತ್ತಿಯು ಹುಟ್ಟಿಕೊಂಡಿತು ಅದರ ಪ್ರಕಾರ ಪರಿಚಲನೆಯಲ್ಲಿರುವ ಹಣದ ಪರಿಮಾಣ m ಮತ್ತು ಬೆಲೆಗಳ ಮಟ್ಟ p ಇವುಗಳ ಮಧ್ಯೆ ಒಂದು ಸಂಬಂಧವಿರುತ್ತದೆ. ಒಂದು ವರ್ಷದೊಳಗೆ ವ್ಯವಹಾರದಲ್ಲಿರುವ ಸರಕುಗಳ ಪರಿಮಾಣವು t ಆಗಿದ್ದು ಮತ್ತು ಹಣದ ಪರಿಚಲನೆಯ ವೇಗವು v ಆಗಿದ್ದರೆ ಆಗ $tp = mv$ ಎಂಬ ಸೂತ್ರವು ಚಾಲ್ತಿಯಲ್ಲಿರುತ್ತದೆ ಎಂದು ಅದು ಹೇಳುತ್ತದೆ. t ಮತ್ತು v ಗಳು ನಿರ್ದಿಷ್ಟ ಮತ್ತು ಅಚಲ ಎಂದು ಭಾವಿಸುವುದಾದರೆ ಆಗ ಬೆಲೆಯ ಮಟ್ಟವಾದ p ಯು ಹಣದ ಸರಬರಾಜು m ಗೆ ಸಮನಾದ ಅನುಪಾತದಲ್ಲಿ ಹೆಚ್ಚಾಗುತ್ತದೆ.

ಆದರೆ ವ್ಯಾಪಾರೋದ್ಯಮವಾದಿಗಳು ವ್ಯವಹಾರದ ಪರಿಮಾಣವು ಒಂದೇ ರೀತಿಯಲ್ಲಿ ಇರುತ್ತದೆ ಎಂದು ಭಾವಿಸಲಿಲ್ಲ. ಬೆಲೆಗಳು ಸ್ವಲ್ಪಮಟ್ಟಿಗೆ ಮೇಲಕ್ಕೆ ಏರುವುದು ಸ್ವಾಗತಾರ್ಹವಾಗಿದ್ದು ಅದು ಆರ್ಥಿಕತೆಯು ಬೆಳೆಯುತ್ತಿದೆ ಎಂಬುದನ್ನು ಸೂಚಿಸುತ್ತಿತ್ತು. ವ್ಯಾಪಾರೋದ್ಯಮವಾದಿ ಲೇಖಕರಿಗೆ ಅರ್ಥವಾಗದಿದ್ದ ಸಂಗತಿ ಏನೆಂದರೆ ದೇಶದೊಳಗೆ ಏರುತ್ತಿದ್ದ ಬೆಲೆಗಳ ಪರಿಣಾಮವಾಗಿ ಗೃಹ ಕೈಗಾರಿಕೆಗಳು ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು ಮತ್ತು ಇದು ವ್ಯಾಪಾರದ ಸಮತೋಲನದ ಮೇಲೆ ಪ್ರಭಾವ ಬೀರುತ್ತಿತ್ತು. ಅರ್ಥಶಾಸ್ತ್ರ ಕುರಿತಾದ ತಮ್ಮ ಪ್ರಬಂಧಗಳ ಮೂಲಕ ಈ ಸಂಬಂಧವನ್ನು ಮೊದಲು ಪರೀಕ್ಷೆಗೆ ಒಡ್ಡಿದವರು ತತ್ವಶಾಸ್ತ್ರಜ್ಞರೂ, ಚರಿತ್ರಕಾರರೂ ಮತ್ತು ಅರ್ಥಶಾಸ್ತ್ರಜ್ಞರೂ ಆದ ಡೇವಿಡ್ ಹ್ಯೂಮ್ (1711-1776). (ಹ್ಯೂಮ್ ಅವರು ಸ್ಮಿತ್ ಅವರ ಗೆಳೆಯರಾಗಿದ್ದು ಅವರಂತೆ ಇವರೂ ಸಹ ಕೆಲವೊಂದು ವ್ಯಾಪಾರೋದ್ಯಮವಾದಿ ಚಿಂತನೆಗಳ ಕಟು ಟೀಕಾಕಾರರಾಗಿದ್ದರು). ಹ್ಯೂಮ್ ಅವರು 'ಪ್ರೈಸ್ ಸ್ಪೀಸಿ ಫ್ಲೋ ಮೆಕ್ಯಾನಿಸಂ' ಎಂಬ ಪರಿಕಲ್ಪನೆಯತ್ತ ಗಮನ

ಸೆಳೆದರು, ಇದನ್ನು 'ಗೋಲ್ಡ್ ಆಟೋಮ್ಯಾಟಿಸಂ' ಎಂದು ಸಹ ಕರೆಯುತ್ತಾರೆ: ಇದರ ಪ್ರಕಾರ ಚಿನ್ನದ ಒಳಹರಿವಿನಿಂದಾಗಿ ಬೆಲೆ ಏರಿಕೆ ಉಂಟಾಗುತ್ತದೆ ಮತ್ತು ಇದು ಒಂದು ದೇಶದ ಸ್ಪರ್ಧಾತ್ಮಕತೆಯನ್ನು ಕುಗ್ಗಿಸುತ್ತದೆ ಹಾಗೂ ಇದು ವ್ಯಾಪಾರದ ಸಮತೋಲನಕ್ಕೆ ಎಡೆ ಮಾಡಿಕೊಡುತ್ತದೆ. ಹ್ಯೂಮ್ ಅವರು ಯಾವುದೇ ಒಂದು ದೇಶವು ಬೇರೆ ದೇಶಗಳನ್ನು ಹಿಂದಕ್ಕೆ ತಳ್ಳಿ ತಾನು ಗೆಲ್ಲಬಹುದು ಎಂಬ ವ್ಯಾಪಾರೋದ್ಯಮವಾದಿ ಪರಿಕಲ್ಪನೆಯನ್ನು ವಿರೋಧಿಸಿದರು; ಈ ಪರಿಕಲ್ಪನೆಯನ್ನು ಅನುಸರಿಸಿ ವ್ಯಾಪಾರೋದ್ಯಮವಾದಿಗಳು ವಿದೇಶಿ ವ್ಯಾಪಾರಕ್ಕೆ ಒತ್ತು ನೀಡಿ ದೇಶದೊಳಗಿನ ವ್ಯಾಪಾರವನ್ನು ಉಪೇಕ್ಷಿಸಿದರು. ದೇಶದೊಳಗಿನ ವ್ಯಾಪಾರದಲ್ಲಿ ಒಬ್ಬರು ಗೆದ್ದರೆ ಇನ್ನೊಬ್ಬರು ಸೋಲುತ್ತಾರೆ, ಆದರೆ ವಿದೇಶಿ ವ್ಯಾಪಾರದಲ್ಲಿ ಬೇರೆ ದೇಶಗಳನ್ನು ಹಿಂದಿಕ್ಕಿ ನಮ್ಮ ರಾಷ್ಟ್ರವು ಗೆಲ್ಲಬಹುದು ಎಂದು ಅವರು ಭಾವಿಸಿದ್ದರು. (ಇಂದಿನ ದಿನಗಳಲ್ಲಿ ನಾವು ಜೀರೋ ಸಮ್ ಆಟವನ್ನು ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು). ಇದರೊಂದಿಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಹ್ಯೂಮ್ ಅವರು, ವಿದೇಶಿ ವ್ಯಾಪಾರ ಮತ್ತು ಆಂತರಿಕ ವ್ಯಾಪಾರ ಎರಡೂ ಸಹ ಭಾಗವಹಿಸುವವರೆಲ್ಲರಿಗೂ ಅನುಕೂಲವನ್ನು ಉಂಟು ಮಾಡುವ ಶಕ್ತಿಯನ್ನು ಹೊಂದಿದ್ದು, ಅವರೆಲ್ಲರ ಕಲ್ಯಾಣವನ್ನು ಹೆಚ್ಚಿಸುತ್ತವೆ ಎಂದು ವಾದಿಸಿದರು.

ವ್ಯಾಪಾರೋದ್ಯಮವಾದಿ ಚಿಂತನೆಯಲ್ಲಿ ಕಂಡುಬಂದಂತಹ ರಾಷ್ಟ್ರೀಯ ಛಾಯೆಗಳು ಬೇರೆ ಬೇರೆ ದೇಶಗಳಲ್ಲಿ ಇದ್ದಂತಹ ವಿಭಿನ್ನ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಪ್ರತಿಬಿಂಬಿಸಿದವು. ಇಂಗ್ಲೆಂಡಿನೊಂದಿಗೆ ಪರಮೋಚ್ಛ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದ ಫ್ರಾನ್ಸ್ ದೇಶದಲ್ಲಿ 14 ನೇ ಲೂಯಿ ಮಹಾರಾಜನ ಹಣಕಾಸು ಮಂತ್ರಿಯಾಗಿದ್ದ ಜೀನ್ ಬ್ಯಾಪ್ಟಿಸ್ಟೇ ಕೊಲ್ಬರ್ಟ್ (1619 -1683) ಹೆಸರಿನಲ್ಲಿ 'ಕೊಲ್ಬರ್ಟಿಸಂ' ಎಂಬ ಚಿಂತನೆಯು ತಲೆಯೆತ್ತಿತ್ತು. ಕೊಲ್ಬರ್ಟ್ ಅವರು ಸರ್ಕಾರದ ಬಜೆಟ್ಟನ್ನು ಪುನರ್ರಚಿಸಿದರು, ಸಾರ್ವಜನಿಕ ಆಡಳಿತವನ್ನು ಸುಧಾರಣೆಗೆ ಒಳಪಡಿಸಿದರು, ದುಬಾರಿ ಆಮದಿನಿಂದ ದೇಶವನ್ನು ಸ್ವತಂತ್ರಗೊಳಿಸಲು ಫ್ರೆಂಚ್ ಉತ್ಪಾದನೆಗೆ ಉತ್ತೇಜನ ನೀಡಿದರು, ವಸಾಹತುಶಾಹಿ ನೀತಿಯನ್ನು ಅನುಸರಿಸುತ್ತಾ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಫ್ರೆಂಚ್ ವೆಸ್ಟ್ ಇಂಡಿಯಾ ಕಂಪನಿಗಳನ್ನು ಆರಂಭಿಸಿದರು. ಫ್ರಾನ್ಸ್ ದೇಶದ ಮೂಲ ಸೌಕರ್ಯವನ್ನು (ರಸ್ತೆಗಳು, ಕಾಲುವೆಗಳು, ಬಂದರುಗಳು) ವಿಸ್ತರಿಸಿದರು ಮತ್ತು ಫ್ರೆಂಚ್ ಆರ್ಥಿಕತೆಯನ್ನು ಆಧುನೀಕರಿಸಲು ವಿದೇಶಿ ವಿಜ್ಞಾನಿಗಳನ್ನು, ತಂತ್ರಜ್ಞಾನಿಗಳನ್ನು ಹಾಗೂ ಕೌಶಲವಿರುವ ಕಾರ್ಮಿಕರನ್ನು ದೇಶದೊಳಗೆ ಕರೆದುಕೊಂಡು ಬಂದರು. ಮತ್ತು ಇತರ ವ್ಯಾಪಾರೋದ್ಯಮವಾದಿಗಳಂತೆ ಇವರು ಸಹ ದೇಶದೊಳಗೆ ಅಮೂಲ್ಯ ಲೋಹಗಳ ಶೇಖರಣೆಯನ್ನು ಹೆಚ್ಚಿಸಲು ವ್ಯಾಪಾರ ಯುದ್ಧಗಳು ಒಂದು ಮುಖ್ಯ ಮೂಲ ಎಂದು ಭಾವಿಸಿದರು.

ಕ್ಯಾಮೆರಲಿಸಂ ಎಂಬುದು ವ್ಯಾಪಾರೋದ್ಯಮವಾದದ ಜರ್ಮನ್ ರೂಪಾಂತರವಾಗಿದ್ದು, 17 ನೇ ಶತಮಾನದಲ್ಲಿ ಜರ್ಮನಿಯ ಸಣ್ಣ ರಾಜ್ಯಗಳಲ್ಲಿ ಮತ್ತು ವಿಶೇಷವಾಗಿ 18 ನೆಯ ಶತಮಾನದ ಪ್ರಬುದ್ಧ ನಿರಂಕುಶವಾದದಲ್ಲಿ (ಜ್ಞಾನೋದಯದಿಂದ ಸ್ಫೂರ್ತಿ ಹೊಂದಿದ ರಾಜತ್ವದಲ್ಲಿ) ಕಂಡುಬಂದಿತು. ರಾಜನ ಭಂಡಾರವನ್ನು ಕ್ಯಾಮೀರ್ ಎಂದು ಕರೆಯುತ್ತಿದ್ದು ಅದರಿಂದ ಈ ಪದವು ಹುಟ್ಟಿಕೊಂಡಿದೆ. ಕ್ಯಾಮೆರಿಲಿಸಂನ ಸಾರಾಂಶವೇನೆಂದರೆ ಒಂದು ದೇಶದ ಸರ್ಕಾರವನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗಲು ಮತ್ತು ಎಲ್ಲ ರೀತಿಯ ಅಪಾಯಗಳಿಂದ ರಕ್ಷಿಸಿಕೊಳ್ಳಲು ಪ್ರಭುತ್ವದ ಭಂಡಾರವನ್ನು ಯಾವಾಗಲೂ ತುಂಬಿಸಿಡುವುದು. ಕ್ಯಾಮರಲಿಸಂನ ವಿಸ್ತಾರವಾದ ಸಾಹಿತ್ಯವು ಸಂವಿಧಾನಾತ್ಮಕ ಮತ್ತು ಆಡಳಿತಾತ್ಮಕ ಕಾನೂನು, ಸಾರ್ವಜನಿಕ ಆಡಳಿತ ಮತ್ತು ಲೆಕ್ಕಪತ್ರ ನಿರ್ವಹಣೆ ಹಾಗೂ ತೆರಿಗೆ ಮತ್ತು ಹಣಕಾಸು ನೀತಿ ಇವೆಲ್ಲವನ್ನು ಚರ್ಚಿಸುತ್ತದೆ. ಈ ಚಿಂತಕರ ಅಭಿಮತದಂತೆ, ಒಂದು ಸೂಕ್ತವಾಗಿ ಕೆಲಸ ಮಾಡುವ ಕೇಂದ್ರೀಯ ಆಡಳಿತಕ್ಕೆ ಕ್ಯಾಮರಲ್ ವಿಜ್ಞಾನಗಳು ಮತ್ತು ಕಾನೂನಿನಲ್ಲಿ ತರಬೇತಿ ಹೊಂದಿರುವ ಸರ್ಕಾರಿ ಉದ್ಯೋಗಿಗಳ ಅಗತ್ಯವು ಕಂಡುಬರುತ್ತದೆ. ಮೂವತ್ತು ವರ್ಷಗಳ ಯುದ್ಧದ (1618-1648) ನಂತರ ಕ್ಯಾಮೆರಲಿಸ್ಟರು, ಯುದ್ಧದಲ್ಲಿ ನಾಶವಾಗಿದ್ದ ಮತ್ತು ಜನಸಂಖ್ಯೆಯು ಕ್ಷೀಣಿಸಿದ್ದ ನಗರಗಳನ್ನು ಮತ್ತು ಹಳ್ಳಿಗಳನ್ನು ಪುನರ್‌ನಿರ್ಮಿಸಿ ಅದರಲ್ಲಿ ಜನರು

ನೆಲೆಸುವಂತೆ ಮಾಡುವ ಅಗತ್ಯತೆಯನ್ನು ಕಾಣತೊಡಗಿದರು. ಜೊತೆಗೆ ಕೃಷಿಗೆ ಉತ್ತೇಜನ ನೀಡಿ ಜನಸಂಖ್ಯೆ ಹೆಚ್ಚುವಂತೆ ಪ್ರೇರೇಪಿಸಿದರು. ಅಲ್ಲದೆ ಕಾರ್ಖಾನೆಯಲ್ಲಿ ಉತ್ಪಾದನೆಯನ್ನು ಆರಂಭಿಸಿ, ಅದಕ್ಕೆ ಉತ್ತೇಜನ ನೀಡಿ, ಮೂಲಸೌಕರ್ಯಗಳನ್ನು ಉತ್ತಮಪಡಿಸಿ ತನ್ಮೂಲಕ ದೇಶದೊಳಗಿನ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವ ದೀರ್ಘಕಾಲೀನ ಗುರಿಯನ್ನು ಅವರು ಹೊಂದಿದ್ದರು. ಈ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಪ್ರಭುತ್ವವು ತನ್ನಷ್ಟಕ್ಕೆ ಅಥವಾ ಖಾಸಗಿ ಉದ್ಯಮದೊಂದಿಗೆ ಸಹಕರಿಸುತ್ತಾ ಒಂದು ಅತ್ಯಗತ್ಯವಾದ ಸಾಧನವಾಗಿರುತ್ತದೆ ಎಂದು ಕ್ಯಾಮೆರಲಿಸ್ಟರು ಭಾವಿಸಿದರು. ಮುಖ್ಯ ಕ್ಯಾಮೆರಲಿಸ್ಟ್ ಚಿಂತಕರೆಂದರೆ ಜೋಹಾನ್ ಜೊಆಕಿಮ್ ಬೆಚರ್ (1635 -1682), ಫಿಲಿಪ್ ವಿಲ್ ಹೆಲ್ಮ್ ವಾನ್ ಹಾರ್ನಿಕ್ (1640–1714), ಜೋಹಾನ್ ಹೆನ್ರಿಚ್ ಗಾಟ್ಲಾಬ್ ವಾನ್ ಜಸ್ಟಿ( 1717-1771) ಮತ್ತು ಜೋಸೆಫ್ ವಾನ್ ಸಾನೆಟ್ ಪಿಲ್ಸ್ -(1732-1817)).

***